ನವಸಾಕ್ಷರ ಪುಸ್ತಕ ಮಾಲೆ ೫೫

ಮದರ್ ಥೆರೆಸಾ

ಡಾ|| ಎಸ್. ವಿದ್ಯಾಶಂಕರ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೫೫

ಮದರ್ ಥೆರೆಸಾ

ಡಾ || ಎಸ್. ವಿದ್ಯಾಶಂಕರ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ . ೫೮೩ ೨೭೭

MOTHER THERESA : By Dr. S. Vidya Shankar. Published by the Director of Prasaranga, Kannada University, Hampi - 583 211, Karnataka.
First Impression 1994, Pp. ii+26 Rs. 8-00

ಸಂಯೋಜನಾಧಿಕಾರಿ
ಡಾ॥ ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮-೦೦

ಮುದ್ರಕರು
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು - ೧೮
ದೂರವಾಣಿ : ೬೬೧೩೧೨೩

ಮದರ್ ಥೆರೆಸಾ

ಮದರ್ ಥೆರೆಸಾ ಭಾರತೀಯರಲ್ಲ. ಈ ಇಳಿವಯಸ್ಸಿನಲ್ಲಿಯೂ ಅವರು ಸೇವೆ ಮಾಡುತ್ತಿರುವುದು ಭಾರತದ ಬಡವರ ನಡುವೆ. ಯುಗೋಸ್ಲಾವಿಯಾದ ಈ ಮಹಿಳೆ ನೂಲಿನ ಬಿಳಿಯ ಸಾದಾ ಸೀರೆಯುಟ್ಟು ತಾಯಿಯ ಪ್ರತಿರೂಪವಾಗಿ ಸೇವೆ ಮಾಡುತ್ತಿರುವರು.. ಮದರ್ ವಾಸ್ತವವಾಗಿ ಕೆಲಸ ಮಾಡುತ್ತಿರುವುದು ಕಲ್ಕತ್ತೆಯ ಕೊಳಚೆ ಪ್ರದೇಶಗಳಲ್ಲಿ. ಬಡವರ, ನಿರ್ಗತಿಕರ, ರೋಗಿಗಳ ಸೇವೆಗಾಗಿಯೇ 'ಮಿಷನರೀಸ್ ಆಫ್ ಚಾರಿಟಿ' ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ಅವರು ಪ್ರಾರಂಭಿಸಿರುವರು. ಈ ಸಂಸ್ಥೆಯ ಸೇವೆ ಭಾರತಕ್ಕಷ್ಟೇ ಸೀಮಿತವಾಗಿಲ್ಲ. ವಿಶ್ವದ ಯಾವ ಮೂಲೆಯಿಂದ ಸೇವೆಗೆ ಕರೆ ಬಂದರೂ ಮದರ್ ತಮ್ಮ ಬಳಗದೊಂದಿಗೆ ಧಾವಿಸುವರು. ಅವರು ಕಷ್ಟಗಳನ್ನು ಮುಗುಳ್ನಗೆಯಿಂದ ಸ್ವೀಕರಿಸುವರು.

ಮದರ್ ಥೆರೆಸಾರವರ ಮೊದಲಿನ ಹೆಸರು ಅಗ್ನೆಸ್ ಗೋನ್ಕಾ ಬೊಜಾಕ್ಸಿವ್. ಅವರು ಯುಗೋಸ್ಲಾವಿಯಾದ ಸ್ಕೋಪ್ಜೆಯಲ್ಲಿ ಅಲ್ಬೇನಿಯನ್ ದಂಪತಿಗಳಿಗೆ ಇಪ್ಪತ್ತೇಳನೇ ಆಗಸ್ಟ್ ಸಾವಿರದ ಒಂಬೈನೂರ ಹತ್ತರಲ್ಲಿ



ಮದರ್ ಥೆರೆಸಾ

ಜನಿಸಿದರು. ಹದಿನೈದನೆಯ ವಯಸ್ಸಿನಲ್ಲಿ ಅವರು ಬೆಂಗಾಲ್ ಮಿಷನ್ನಿನ ಮಿಷನರಿಯೊಬ್ಬರು ಸ್ವಯಂಸೇವಕರಿಗಾಗಿ ಬರೆದ ಪತ್ರದಿಂದ ಪ್ರಭಾವಿತರಾದರು. ಅವರು ಹೋಗುತ್ತಿದ್ದ ಶಾಲೆಯ ಪಾದ್ರಿಗಳು ಅಲ್ಲಿನ ಹುಡುಗರು ಹುಡುಗಿಯರಿಗೆ ಪರಮಾತ್ಮನ ಕರೆಗೆ ಅನುಗುಣವಾಗಿ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಸಹಾಯ ಮಾಡಿದರು. ಹದಿನೆಂಟನೆಯ ವಯಸ್ಸಿನವರೆವಿಗೂ ಅವರಿಗೆ ಸನ್ಯಾಸಿನಿ ಆಗಬೇಕೆಂಬ ಬಯಕೆ ಆಗಿರಲಿಲ್ಲ. ಅವರದು ಸಂತೋಷ ತುಂಬಿದ ಕುಟುಂಬ. ಯಾವುದೊ ಒಂದು ದಿವ್ಯಶಕ್ತಿ ಸನ್ಯಾಸಿನಿ ಆಗಲು ಅವರನ್ನು ಪ್ರೇರೇಪಿಸಿತು. ಆಗ ಅವರು ದಿವ್ಯ ಕರೆಗೆ ಓಗೊಟ್ಟು ಕಾನ್ವೆಂಟಿಗೆ ಹೋಗಲು ತೀರ್ಮಾನಿಸಿದರು. ಸಾವಿರದ ಒಂಬೈನೂರ ಇಪ್ಪತ್ತೆಂಟರಲ್ಲಿ ಅವರು ಲೊರೆಟೊ ಅಬ್ಬೆ, ರಾತ್‌ಫರ್‌ನ್ಹಾಂ, ಡಬ್ಲಿನ್‌ಗಳಿಗೆ ಹೋದರು. ಅಲ್ಲಿಂದ ಅವರು ಭಾರತಕ್ಕೆ ತರಬೇತಿಗಾಗಿ ಬಂದರು. ಸಾವಿರದ ಒಂಬೈನೂರ ಇಪ್ಪತ್ತೊಂಬತ್ತರಿಂದ, ಸಾವಿರದ ಒಂಬೈನೂರ ನಲವತ್ತೆಂಟರವರೆವಿಗೆ ಅವರು ಕಲ್ಕತ್ತಾದ ಸೈಂಟ್ ಮೇರೀಸ್ ಪ್ರೌಢಶಾಲೆಯಲ್ಲಿ ಬೋಧಕರಾಗಿದ್ದರು. ಹಾಗೆಯೇ ಆ ಕೆಲಸದ ಜೊತೆಗೆ ಲೊರೆಟೊ ಸಿಸ್ಟರ್‌ಸ್‌ಗೆ ಸೇರಿದ್ದ ಡಾಟರ್ಸ್ ಆಫ್ ಸೈಂಟ್ ಅನ್ನೆ, ಸಂಸ್ಥೆಗಳ ಮೇಲುಸ್ತುವಾರಿಯನ್ನೂ ನೋಡಿಕೊಂಡಿದ್ದರು. ತಾವು ಸನ್ಯಾಸಿನಿಯಾದದ್ದರ ಬಗೆಗೆ ಅವರು ಒಂದು ಕ್ಷಣವಾದರೂ ಸಂದೇಹಿಸಿಲ್ಲ.

ಅವರಿಗೆ ಎರಡನೆಯ ಸಲ ದೈವಪ್ರೇರಣೆ ಬಂದುದು ಸಾವಿರದ ಒಂಬೈನೂರ ನಲವತ್ತಾರರ ಸೆಪ್ಟೆಂಬರ್‌ನಲ್ಲಿ. ಆಗ ಸನ್ಯಾಸಿನಿಯಾಗಿದ್ದ ಅವರು ಕರ್ತವ್ಯದಿಂದ ಹಿಂದೆ ಸರಿಯದಿರುವ ಪ್ರತಿಜ್ಞೆಯನ್ನು ಸ್ವೀಕರಿಸಿದ್ದರು. ಸನ್ಯಾಸಿನಿ ಯೋರ್ವಳು ತನ್ನ ಕಾನ್ವೆಂಟನ್ನು ಬಿಟ್ಟುಹೋಗುವಂತಿಲ್ಲ. ಆದರೆ, ಕಾನ್ವೆಂಟನ್ನು ಬಿಟ್ಟು ಹೋಗಲು, ಕಲ್ಕತ್ತಾದ ಆರ್ಚ್ ಬಿಷಪ್‌ರವರಿಗೆ ವಿಧೇಯಳಾಗಿದ್ದುಕೊಂಡು ಧಾರ್ಮಿಕ-ಜೀವನ ನಡೆಸಲು, ಅವರಿಗೆ ಒಪ್ಪಿಗೆ ಸಿಕ್ಕಿತು.

ಆಮೇಲೆ ಅವರು ಪಾಟ್ನಾದಲ್ಲಿದ್ದ ಸಿಸ್ಟರ್‌ಗಳ ಬಳಿಗೆ ವೈದ್ಯಕೀಯ ತರಬೇತಿಗಾಗಿ ಹೋದರು. ಇದರಿಂದಾಗಿ ಅವರು ಬಡವರ ಮನೆಗಳಿಗೆ

ಹೋಗಲು ಸಾಧ್ಯವಾಯಿತು. ಅಲ್ಲಿಯವರೆವಿಗೂ ಉಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದ್ದ ಅವರು, ಈಗ ಬಡವರ ಮನೆಗಳಿಗೆ ಹೋಗಿ ಮಕ್ಕಳನ್ನೂ, ರೋಗಿಗಳನ್ನೂ ನೋಡಿಕೊಳ್ಳಬೇಕಾಯಿತು.

ಕಲ್ಕತ್ತಾದ ರಸ್ತೆಗಳಲ್ಲಿ ನಿರ್ಗತಿಕರಾಗಿ ಬಿದ್ದಿರುವ ಜನರನ್ನು ರಕ್ಷಿಸುವ ಜವಾಬ್ದಾರಿ ಹೊತ್ತ ಪ್ರಸಂಗ ಕುತೂಹಲಕಾರಿಯಾಗಿದೆ. ಪತ್ರಿಕಾ ವರದಿಗಾರರು ಮದರ್ ಥೆರೆಸಾ ಅವರಿಗೆ ಯಾವುದೇ ತುರ್ತು ವೈದ್ಯೋಪಚಾರವೂ ಇಲ್ಲದೆ ಜನ ರಸ್ತೆಯಲ್ಲಿ ಸಾಯುತ್ತಾ ಬಿದ್ದಿರುವ ಸುದ್ದಿ ತಿಳಿಸಿದರು. ಅವರನ್ನು ನೋಡಲು ಹೋದಾಗ ಮದರ್ ಥೆರೆಸಾ ಅವರಿಗೆ ಇದಿರಾದ ಮೊದಲ ಸಮಸ್ಯೆಯೆಂದರೆ, ಅವರನ್ನು ನೆಲೆಗೊಳಿಸಲು ಅಗತ್ಯವಾಗಿ ಬೇಕಾಗಿದ್ದ ಒಂದು ಸ್ಥಳದ್ದು.

ನಿರ್ಗತಿಕರಿಗೆ ನೆಲೆಯೊದಗಿಸಲು ಮದರ್ ಥೆರೆಸಾರವರು ಮುನಿಸಿಪಲ್ ಸರಕಾರವನ್ನು ಪ್ರಾರ್ಥಿಸಿದರು. ಅವರು ಕಾಳಿದೇವಾಲಯದ ಎರಡು ಹಾಲ್‌ಗಳನ್ನು ಬಿಟ್ಟು ಕೊಟ್ಟರು. ಮದರ್ ಸಂತೋಷದಿಂದ ಆ ಸೌಕರ್ಯವನ್ನು ಒಪ್ಪಿಕೊಂಡರು. ಏಕೆಂದರೆ, ಅದು ಹಿಂದೂಗಳ ಪೂಜಾಕೇಂದ್ರವಾಗಿದ್ದಿತು, ರೋಗಿಗಳನ್ನು ಅಲ್ಲಿಗೆ ಕರೆತರಲಾಯಿತು. ಕಾಳಿಯ ಪೂಜಾರಿಗಳಿಗೆ ಅನ್ಯರು ಅಲ್ಲಿಗೆ ಬಂದು ಸೇರುವುದು ಒಪ್ಪಿಗೆಯಾಗಲಿಲ್ಲ. ಆದರೆ ಅವರಲ್ಲಿ ಒಬ್ಬನು ಅಂಟು ರೋಗವೊಂದಕ್ಕೆ ಗುರಿಯಾಗಿ ಮಲಗಿದನು. ಅವನ ಶುಶ್ರೂಷೆಯನ್ನು ಮದರ್ ಬಹಳ ಚೆನ್ನಾಗಿ ಮಾಡಿದರು. ಅಲ್ಲಿಂದ ಮುಂದೆ ಪೂಜಾರಿಗಳು ಸ್ನೇಹದಿಂದ ವರ್ತಿಸತೊಡಗಿದರು. ಎರಡು ವರ್ಷಗಳ ನಂತರ, ಅಂದರೆ, ಸಾವಿರದ ಒಂಬೈನೂರ ಐವತ್ತರ ಅಕ್ಟೋಬರ್‌ನಲ್ಲಿ 'ನ್ಯೂ ಕಾಂಗ್ರಿಗೇಷನ್ ಆಫ್ ದಿ ಮಿಷನರೀಸ್ ಆಫ್ ಚಾರಿಟಿ' ಕಲ್ಕತ್ತೆಯಲ್ಲಿ ಸ್ಥಾಪಿತವಾಯಿತು.

ಸಿಸ್ಟರ್ ಅಗ್ನೆಸ್‌ರವರು 'ಮಿಷನರಿ ಆಫ್ ಚಾರಿಟಿ'ಯ ಮೊದಲ ಕಾರ್ಯಕರ್ತೆ. ಸಾವಿರದ ಒಂಬೈನೂರ ನಲವತ್ತೊಂಬತ್ತರ ನಂತರ, ಮದರ್ ಥೆರೆಸಾರವರ ವಿದ್ಯಾರ್ಥಿಗಳು ಒಬ್ಬರಾದ ಮೇಲೆ ಒಬ್ಬರಂತೆ ಬರತೊಡಗಿದರು.



ರೋಗಿಗಳ ಶುಶ್ರೂಷೆಯಲ್ಲಿ

ಅವರೆಲ್ಲರೂ ಬಂದ ಕ್ಷಣವೇ ತಮ್ಮ ಸಮಸ್ತವನ್ನೂ ದೇವರಿಗೆ ಅರ್ಪಿಸಿದರು. ಬಡವರು ಧರಿಸುವ ನೂಲಿನ ಸೀರೆಯನ್ನು ಸಂತೋಷದಿಂದ ಧರಿಸಿದರು. ಇಲ್ಲಿನ ಸೇವಾಚಟುವಟಿಕೆ ಅತ್ಯಂತ ಕಷ್ಟದಾಯಕವಾದುದೆಂದು ತಿಳಿದೇ ಅವರು ಇಲ್ಲಿಗೆ ಬಂದರು.

ಮದರ್ ಥೆರೆಸಾ ತಮ್ಮ ಪ್ರಾರಂಭದ ದಿನಗಳಲ್ಲಿ ಹಣಕ್ಕಾಗಿ ಯಾರನ್ನೂ ಬೇಡಲಿಲ್ಲ. ಅವರು ಸಂಪೂರ್ಣವಾಗಿ ದೇವರ ಮೇಲಣ ಪ್ರೀತಿಗಾಗಿ ಬಡವರ ಸೇವೆ ಮಾಡಲು ಬಯಸಿದರು. ಧನಿಕರು ಹಣದಿಂದ ಏನನ್ನು ಪಡೆಯಬಹುದೋ ಅದನ್ನು 'ಹೌಸ್ ಆಫ್ ದ ಡೈಯಿಂಗ್' ನಲ್ಲಿ ಬಡವರು ಉಚಿತವಾಗಿ ಪಡೆಯಲು ಅವರು ಶ್ರಮಿಸಿದರು. ಅವರು ಪ್ರಾರುಭದಲ್ಲಿ ಕೆಲವೇ ರೂಪಾಯಿಗಳನ್ನು ತಮ್ಮ ಕಿಸೆಯಲ್ಲಿಟ್ಟುಕೊಂಡು ಕಲ್ಕತ್ತಾದ ದರಿದ್ರರಿರುವ ಭಾಗಗಳಿಗೆ ತಮ್ಮ ಪ್ರೀತಿಯ ಸೇವಾಕಾರ್ಯ ಪ್ರಾರಂಭಿಸಲು ಹೊರಟರೆಂದರೆ ಯಾರಿಗಾದರೂ ಆಶ್ಚರ್ಯವಾಗದಿರದು. ನಾವು ಅವರ ಧೈರ್ಯವನ್ನು, ಧ್ಯೇಯದ ಬಗೆಗಿನ ನಿಷ್ಠೆಯನ್ನು ಊಹಿಸಿಕೊಳ್ಳಬಹುದು.

'ಹೌಸ್ ಆಫ್ ದ ಡೈಯಿಂಗ್' ಈಗಲೋ ಆಗಲೋ ಸಾಯುತ್ತಿರುವ ಯಾರಿಗೂ ಬೇಡವಾದವರ ಶುಶ್ರೂಷೆ ಮಾಡುವ ಸ್ಥಳ; ಸಾಧ್ಯವಾದಷ್ಟು ಮಟ್ಟಿಗೆ ಸಾಯಲಿರುವವರ ಜೀವವನ್ನು ಉಳಿಸಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗುತ್ತದೆ. ಪ್ರಾಣ ಹೋಗುತ್ತಿರುವವರನ್ನು ರಸ್ತೆಯ ಬದಿಯಿಂದ ತಂದ ಮೇಲೆ, ಅವರ ಮುಖ ಹಾಗೂ ಮೈಯನ್ನು ತೊಳೆಯುವುದು ಮೊದಲ ಕೆಲಸ. ಇಲ್ಲಿಗೆ ಬಂದವರಲ್ಲಿ ಬಹಳಷ್ಟು ಮಂದಿಗೆ ಸೋಪು ಎಂದರೇನು ಎಂಬುದೇ ತಿಳಿದಿರಲಿಲ್ಲ. ಸ್ಪಂಜ್ ಸ್ನಾನಕ್ಕೆ ಅವರು ಹೆದರಿದರಂತೆ! ಸಿಸ್ಟರ್‌ಗಳು ಈ ದುಃಖಿಗಳ ಮುಖದಲ್ಲಿ ಏಸುಕ್ರಿಸ್ತನನ್ನು ಕಾಣದಿದ್ದರೆ, ಅವರಿಗೆ ಈ ಕೆಲಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಜನರಿಗೆ ತಮ್ಮನ್ನು ನಿಜವಾಗಿಯೂ ಪ್ರೀತಿಸುವ ಜನರಿದ್ದಾರೆ ಎಂಬುದನ್ನು ಮನವರಿಕೆಮಾಡಿ ಕೊಡಬೇಕಾಗಿತ್ತು. ಇಲ್ಲಿಗೆ ಬಂದ ಮೇಲೆ, ಪ್ರೀತಿಯ ಸವಿಯನ್ನು ಉಂಡ ಮೇಲೆ ಅವರು ಮತ್ತೆ ಮನುಷ್ಯರಾಗಿ ಅದರ ಘನತೆಯನ್ನು ಕಂಡರು.



ದಯೆವೇ ಧರ್ಮದ ಮೂಲವಯ್ಯಾ

ದಯೆ, ಕರುಣೆ, ತ್ಯಾಗಗಳ ಸಂಕೇತ ಮದರ್ ಥೆರೆಸಾ. ಹಲವು ಸಂಸಾರಗಳನ್ನು ಭೇಟಿಮಾಡಿದಾಗ ಹೃದಯವಿದ್ರಾವಕ ದೃಶ್ಯಗಳನ್ನು ಅವರು ಎದುರಿಸಬೇಕಾಯಿತು. ಸತ್ತ ತನ್ನ ತಾಯಿಯ ತಲೆಯನ್ನು ಪುಟ್ಟ ಮಗುವೊಂದು ಪ್ರೀತಿಯಿಂದ ಸವರುತ್ತಿತ್ತು. ಅದಕ್ಕೆ ತನ್ನ ತಾಯಿ ಸತ್ತಿರುವಳೆಂಬುದೂ ತಿಳಿದಿಲ್ಲ, ತಿಳಿಯಲಾರದು. ಎರಡು ದಿವಸಗಳ ಹಿಂದೆ ಸತ್ತ ತಮ್ಮ ತಂದೆಯ ಹೆಣದ ಪಕ್ಕದಲ್ಲಿ ಇಬ್ಬರು ಮಕ್ಕಳು ಸುಮ್ಮನೆ ಕುಳಿತಿದ್ದುದನ್ನು ಸಿಸ್ಟರ್‌ಗಳು ನೋಡಿದರು. ಅಂತಹ ಕರುಳುಕರಗಿಸುವ ಸಮಯದಲ್ಲಿ ಆ ಬಡಪ್ರಾಣಿಗಳ ಸಂಕಟವನ್ನು ಪರಿಹರಿಸಲು ಮದರ್ ಥೆರೆಸಾ ಹಾಗೂ ಅವರ ಹಿಂಬಾಲಕರು ತಮ್ಮ ಎಲ್ಲ ಶಕ್ತಿಯನ್ನೂ ಉಪಯೋಗಿಸಬೇಕಾಗುತ್ತಿತ್ತು.

'ಹೌಸ್ ಆಫ್ ದ ಡೈಯಿಂಗ್' ಇಪ್ಪತ್ತೈದನೇ ವಾರ್ಷಿಕೋತ್ಸವದ ವೇಳೆಗೆ ಮೂವತ್ತಾರು ಸಾವಿರಕ್ಕೂ ಹೆಚ್ಚು ಮಂದಿ ಪ್ರಾಣಾಂತಿಕ ಸ್ಥಿತಿಯಲ್ಲಿದ್ದವರನ್ನು ರಸ್ತೆಯ ಬದಿಯಿಂದ ತರಲಾಯಿತು. ಅವರಲ್ಲಿ ಹದಿನಾರು ಸಾವಿರ ಜನ ನೆಮ್ಮದಿಯಿಂದ ಸತ್ತರು. ಒಂದು ದಿನ ಸಿಸ್ಟರ್‌ಗಳು ಆಗಲೇ ಹುಳುಗಳಿಂದ ಅರ್ಧ ತಿನ್ನಲ್ಪಟ್ಟ ವ್ಯಕ್ತಿಯನ್ನು ಕರೆತಂದರು. ಅವನು ಹೇಳಿದ: "ನಾನು ರಸ್ತೆಯಲ್ಲಿ ಪ್ರಾಣಿಗಳಂತೆ ಜೀವಿಸಿದ್ದೆ. ಆದರೆ ನಾನಿಲ್ಲಿ ಪ್ರೀತಿ ಪೂರ್ಣವಾದ ಆರೈಕೆಯ ನಡುವೆ ದೇವತೆಯಂತೆ ಸಾಯಲು ಹೊರಟಿರುವೆನು'' ನಿಜವಾಗಿಯೂ ಅವನು ದೇವತೆಯಂತೆ ಸತ್ತ. ಪ್ರಶಾಂತವಾದ ಸಾವು ಅವನದು.

ರಸ್ತೆಯಲ್ಲಿ ಬಿದ್ದ ಅನಾಥರನ್ನು ರಕ್ಷಿಸುವ ಕಾರ್ಯ ಭಾರತಕ್ಕಷ್ಟೇ ಸೀಮಿತವಾಗದೆ ಹೊರದೇಶಗಳಲ್ಲೂ ಇದನ್ನು ಕಾರ್ಯರೂಪಕ್ಕೆ ತರಲಾಗಿದೆ.

ಬಡವರ ಬಳಿಗೆ

ತಮ್ಮ ಕೆಲಸದ ಮಹತ್ವ ಅವರಿಗೆ ತಿಳಿದಿದೆ! "ನಾವು ಮಾಡುತ್ತಿರುವುದು ಸಾಗರದಲ್ಲೊಂದು ಬಿಂದು. ಈ ಬಿಂದು ಸಾಗರವನ್ನು ಸೇರದಿದ್ದರೆ ನಷ್ಟವಾಗುತ್ತಿತ್ತು. ಬಡವರ ಮನೆಗಳ ಸಮೀಪದಲ್ಲಿ ಪುಟ್ಟ ಪ್ರಾಥಮಿಕ ಶಾಲೆಗಳನ್ನು ತೆರೆದೆವು. ಅಲ್ಲಿಗೆ ಮಕ್ಕಳನ್ನು ಬರಮಾಡಿಕೊಂಡು ಅವರು ಅದನ್ನು ಪ್ರೀತಿಸುವಂತೆ ಮಾಡಿದೆವು; ಆ ಮಕ್ಕಳು ಸ್ವಚ್ಛತೆಯಿಂದಿರಲು ಕಲಿಸಿದೆವು. ನಾನು ಆ ಪುಟ್ಟ ಶಾಲೆಗಳನ್ನು ತೆರೆಯದಿದ್ದಲ್ಲಿ ಸಾವಿರಾರು ಮಕ್ಕಳು ಬೀದಿಯಲ್ಲಿ ಬಿದ್ದಿರುತ್ತಿದ್ದವು. ಸಾಯುತ್ತಿರುವವರಿಗಾಗಿ ನಾವು ಮನೆಯನ್ನು ಹೊಂದಿರದಿದ್ದಲ್ಲಿ ನಾವು ಕರೆತಂದವರು ರಸ್ತೆಯಲ್ಲಿಯೇ ಪ್ರಾಣಬಿಡುತ್ತಿದ್ದರು. ಈ ಮನೆಯನ್ನು ಹೊಂದಿರುವುದರಲ್ಲಿ ಏನೇ ಕಷ್ಟಗಳಿರಲಿ ಅದರಲ್ಲೊಂದು ಸಾರ್ಥಕತೆಯಿದೆ. ಕೆಲವೇ ಕೆಲವರನ್ನು ಈ ಮನೆಗೆ ನಾವು ಕರೆದುತಂದರೂ ಅವರು ತಮ್ಮ ಕೊನೆಗಾಲದಲ್ಲಿ ಗೌರವದೊಂದಿಗೆ, ಶಾಂತಿಯೊಂದಿಗೆ ಸಾಯುವರೆಂಬ ಧನ್ಯತೆಯಿದೆ.''

ಮದರ್ ಥೆರೆಸಾ ಹೇಳುವಂತೆ "ಬಡತನವನ್ನು ದೇವರು ಸೃಷ್ಟಿಸಿಲ್ಲ, ಅದನ್ನು ನಾವು ಸೃಷ್ಟಿಸಿರುವೆವು. ದೇವರ ಮುಂದೆ ನಾವೆಲ್ಲರೂ ಬಡವರೇ." ಐಶ್ವರ್ಯವಂತರ ಮನೆಗೆ ಹೋಗಬೇಕಾದ ಸಂದರ್ಭ ಬಂದಾಗ ಮದರ್‌ಗೆ ಉಸಿರುಗಟ್ಟಿದ ಅನುಭವಾಗುತ್ತಿತ್ತು, ನೆಮ್ಮದಿ ಕಳೆದುಕೊಂಡ ಅನುಭವವಾಗುತ್ತಿತ್ತು. ಸೆನೆಟರ್ ಟೆಡ್ ಕೆನಡಿ ಮದರ್ ಥೆರೆಸಾರವರನ್ನು ವಾಷಿಂಗ್‌ಟನ್‌ಗೆ ಆಹ್ವಾನಿಸಿದಾಗ ಅಲ್ಲಿ ಬ್ರಿಟಿಷ್ ಲೇಖಕ ಸೈಂಟ್ ಜಾನ್ ಸ್ಟಿವಾನ್ ಕೂಡಾ ಹಾಜರಿದ್ದರು. ಅವರು ಮದರ್ ಥೆರೆಸಾರವರನ್ನು 'ಇಂತಹಾ ಐಶ್ವರ್ಯದ ನಡುವೆ ಇರುವಾಗ ನಿಮಗೆ ಹೇಗೆ ಅನ್ನಿಸುತ್ತದೆ' ಎಂದು ಪ್ರಶ್ನಿಸಿದರು. ಅದಕ್ಕೆ ಅವರು 'ನನಗೆ ವ್ಯಥೆಯಾಗಿದೆ. ನಾನು ವಾಷಿಂಗ್‌ಟನ್‌ನ ಮನೋಹರವಾದ ಡ್ರಾಯಿಂಗ್ ರೂಂನಲ್ಲಿರುವುದು, ಬಡವರ ಪಕ್ಷವಹಿಸಿ ಯಾರಾದರೂ ಒಬ್ಬರು ಹೇಳಿ ಕೊಳ್ಳಬೇಕಾಗಿದೆ, ಅದೊಂದೇ ಕಾರಣಕ್ಕಾಗಿ' ಎಂದು ಉತ್ತರಿಸಿದರು. ಮದರ್ ಥೆರೆಸಾ ಹಣವಂತರನ್ನು ಖಂಡಿಸುತ್ತಿರಲಿಲ್ಲ. ಅವರ ಗುರಿ ಬಡವರನ್ನು ಹಾಗೂ ಹಣವಂತರನ್ನು ಒಂದುಗೂಡಿಸುವುದು. ಇದರ ಪರಿಣಾಮವನ್ನು ಅವರು ಪ್ರತ್ಯಕ್ಷ ಕಂಡಿರುವರು. ಬೀದಿಯಿಂದ ರಕ್ಷಿಸಲ್ಪಟ್ಟ ಮಕ್ಕಳನ್ನು ಉಚ್ಚಜಾತಿಯ ಕುಟುಂಬಗಳು ದತ್ತು ಸ್ವೀಕರಿಸುತ್ತಿವೆ.

ಬಡವರ ಸೇವೆಗೆ ಹೋಗುವಾಗ ಪ್ರಸನ್ನ ಮನೋಭಾವವಿರಬೇಕೆಂದು ಮದರ್ ಥೆರೆಸಾ ಅಪೇಕ್ಷಿಸುತ್ತಾರೆ. ಏಕೆಂದರೆ, ನಮ್ಮ ಮಂದಹಾಸ ಅವರ ಸಂಕಷ್ಟಗಳನ್ನು ಕೆಲಕ್ಷಣಗಳಾದರೂ ಮರೆಮಾಡಬೇಕು, ಅವರಲ್ಲಿ ಜೀವನೋತ್ಸಾಹವನ್ನು ತುಂಬಬೇಕು. ಅವರು ಸಿಸ್ಟರ್ಸ್‌ಗಳಿಗೆ ಹೀಗೆ ಹೇಳುತ್ತಾರೆ: "ನಿಮ್ಮಲ್ಲಿ ಯಾರಾದರೂ ಬಡವರ ಬಳಿಗೆ ಹೋಗುವಾಗ ಕನಿಷ್ಠ ಪಕ್ಷ ಸುಪ್ರಸನ್ನ ಮನೋಭಾವ ಹೊಂದಿಲ್ಲದಿದ್ದರೆ, ದಯಮಾಡಿ ಹೋಗಬೇಡಿ. ಬಡವರು ಹಲವಾರು ಕಾರಣಗಳಿಂದಾಗಿ ಮೊದಲೇ ದುಃಖಿತರಾಗಿರುವರು; ನಮ್ಮ ನಿರುತ್ಸಾಹದ ಸಪ್ಪೆ ಮುಖವನ್ನು ಏಕೆ ಅವರ ಬಳಿಗೆ ತೆಗೆದುಕೊಂಡು ಹೋಗಬೇಕು?"

ಬಡತನವೆಂದರೇನೆಂದು ತಿಳಿಯದ ಯುವಪೀಳಿಗೆಯವರು ಮದರ್



ನಾವೂ ನಿಮಗೆ ನೆರವಾಗುತ್ತೇವೆ – ಯುವ ಜನರ ನುಡಿ

ಥೆರೆಸಾ ಅವರ ನಿಸ್ವಾರ್ಥ ಸೇವೆಯಿಂದ, ಆಕರ್ಷಿತರಾಗಿರುವರು. ಬಡಜನರ ಸೇವೆಯಲ್ಲೂ ದೇವರನ್ನು ಕಾಣುವ ಹಂಬಲ ದಿನದಿನಕ್ಕೆ ಅವರಲ್ಲಿ ತೀವ್ರವಾಗುತ್ತಿದೆ. ಪ್ರೀತಿಯೇ ದೇವರು ಎಂಬ ಮದರ್‌ಥೆರೆಸಾ ಅವರ ಜೀವನ ಸಿದ್ಧಾಂತವನ್ನು ವಿಶ್ವದಲ್ಲೆಲ್ಲಾ ಹರಡಲು ಯುವಕರು ಮುಂದೆ ಬರುತ್ತಿರುವರು. ಐಶ್ವರ್ಯ ಒದಗಿಸುವ ಸುಖಗಳ ನಡುವೆ ಬಡತನವೆಂದರೇನೆಂದು ತಿಳಿಯದ ಮುಗ್ಧ ಯುವಜನತೆ ವಿಶ್ವದ ಎಲ್ಲೆಡೆಗಳಿಂದ ಮದರ್ ತೆರೆಸಾ ಅವರ ಬಳಿಗೆ ಬರುತ್ತಿರುವರು. ದೀನರ ಸೇವೆಗೆ ತಮ್ಮನ್ನು ಮುಡಿಪು ಮಾಡಿಕೊಳ್ಳಬೇಕೆಂಬ ಸಂಕಲ್ಪ ಎಷ್ಟು ತೀವ್ರತರವಾಗಿದೆಯೆಂದರೆ ಹಾರ್ಲೇಮ್‌ನ ಓರ್ವ ಶ್ರೀಮಂತ ಮಹಿಳೆ ತನ್ನಲ್ಲಿದ್ದುದನ್ನೆಲ್ಲಾ ಬಡವರಿಗೆ ಹಂಚಿಬಿಟ್ಟು ಮದರ್ ಥೆರೆಸಾ ಅವರ ಬಳಿಗೆ ಬಂದು "ನಾನೀಗ ಕ್ರಿಸ್ತನನ್ನು ಅನುಸರಿಸಲು ಬಂದಿದ್ದೇನೆ" ಎಂದಳಂತೆ.

ಒಂಟಿತನ

ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಸಾಮಾಜಿಕ ನೆಲೆಯಲ್ಲಿ ಅನೇಕ

ಬದಲಾವಣೆಗಳಾಗಿವೆ. ಸುಖದ ಬೆನ್ನುಹತ್ತಿ ಹೊರಟ ಮನುಷ್ಯನ ಸ್ವಾರ್ಥದ ಕಾರಣವಾಗಿ ಕೌಟುಂಬಿಕ ಸಂಬಂಧಗಳಲ್ಲಿ ಬಿರುಕು ಕಾಣಿಸಿಕೊಳ್ಳುತ್ತಿವೆ. ಮನುಷ್ಯ ಮನುಷ್ಯರ ನಡುವಣ ಸಂಬಂಧದಲ್ಲಿ ಮಧುರವಾದ ಬಾಂಧವ್ಯ ಉಳಿದಿಲ್ಲ. ತಮ್ಮ ಸುಖವಷ್ಟೇ ಪ್ರಧಾನವಾಗಿ ಬಾಂಧವ್ಯದ ಸಂಬಂಧ ಕಳಚಿಕೊಂಡು ಸ್ವಂತಂತ್ರವಾಗಿರಲು ಹೊರಟಾಗ ಸಂಕಟಕ್ಕೆ ಗುರಿಯಾದವರ ಒಂಟಿತನ ಹೃದಯ ಕಲಕುವಂತಹದು. ವಯಸ್ಸಾದ ತಂದೆ–ತಾಯಿಯರನ್ನು ಮಗ ತೊರೆದು, ಬೇರೆಯಾಗಿ ತನ್ನ ಹೆಂಡತಿ ಮಕ್ಕಳೊಡನೆ ಇರಹೊರಟಾಗ ಹೆತ್ತವರ ಸಂಕಟ ಮಾತಿನಲ್ಲಿ ಹೇಳಲಾಗದು. ಇದು ವಿಶ್ವದ ಎಲ್ಲೆಡೆಗೆ ಅನ್ವಯಿಸುವಂತಹದು. ಒಂಟಿತನದ ನೋವು ಅನುಭವಿಸಬೇಕಾದವರ ಪಾಡು ಒಂದೇ ಬಗೆಯಾದುದು. ಪ್ರೀತಿಯ ಕೊರತೆಯಿಂದ, ಆರೈಕೆಯ ಕೊರತೆಯಿಂದ ಒಂಟಿತನ ಇನ್ನಷ್ಟು ಅಸಹನೀಯವಾಗಬಹುದು. ವಯಸ್ಸಾದವರ ಪಾಲಿಗೆ ಒಂಟಿತನ ಒಂದು ಶಾಪ. ಮದರ್ ಹೇಳುವಂತೆ ವಿಶ್ವದಲ್ಲಿ ಅತ್ಯಂತ ಕ್ರೂರವಾದ ಕಾಯಿಲೆ ಕ್ಷಯ ಅಥವಾ ಕುಷ್ಟರೋಗವಲ್ಲ: ಒಂಟಿತನ. ಹಾಗೂ ನಮಗೆ ಅತ್ಯಂತ ಪ್ರಿಯರಾಗಿರುವವರಿಂದ ಅನಾದರಣೆಗೆ ಒಳಗಾಗುವುದು. ಒಮ್ಮೆ ಆಗರ್ಭ ಶ್ರೀಮಂತ ವೃದ್ಧನೊಬ್ಬ ಮದರ್ ಅವರ ಬಳಿ ಬಂದು "ನೋಡಿ, ನನ್ನಲ್ಲಿರುವುದನ್ನೆಲ್ಲಾ ನಿಮಗೆ ಕೊಡಬಯಸುತ್ತೇನೆ. ನಮಗೆ ಹೊತ್ತುಕಳೆಯಲು ಕಷ್ಟವಾಗುತ್ತಿದೆ. ನಿಮ್ಮಲ್ಲಿ ಯಾರಾದರೊಬ್ಬರನ್ನು ನಮ್ಮಲ್ಲಿಗೆ ಕಳುಹಿಸಿ. ನಾನು ಅರೆಕುರುಡ, ನನ್ನ ಪತ್ನಿಗೆ ಯಾವುದರಲ್ಲೂ ಉತ್ಸಾಹವಿಲ್ಲ. ನಮ್ಮ ಮಕ್ಕಳು ನಮ್ಮನ್ನು ತ್ಯಜಿಸಿ ಬೇರೆಡೆ ಇರುವರು. ನಾವಿಲ್ಲಿ ಒಂಟಿತನದಿಂದ ಸಾಯುತ್ತಿದ್ದೇವೆ" ಎಂದನು.

ಮದರ್ ಒಂಟಿತನದಿಂದ ನರಳುವವರ ಪಾಲಿಗೆ ದೇವತೆ. ಅವರು ಇಂತಹವರಿಗಾಗಿಯೇ ವೃದ್ಧಾಶ್ರಮಗಳನ್ನು ದೇಶವಿದೇಶಗಳಲ್ಲಿ ಸ್ಥಾಪಿಸಿ ಇಳಿ ವಯಸ್ಸಿನವರ ಬಾಳನ್ನು ಪ್ರೀತಿಯ ದೀವಿಗೆಯಿಂದ ಬೆಳಗಿಸಿರುವರು. ನಮ್ಮ ಪಕ್ಕದ ಮನೆಯಲ್ಲಿಯೇ ಇರುವ ಅಂಥವರ ಬಗೆಗೆ ನಾವು ತಿಳಿದಿದ್ದೇವೆಯೆ ? ಕುರುಡನೊಬ್ಬನಿದ್ದಾನೆಂದು ತಿಳಿಯೋಣ. ಅವನಿಗಾಗಿ ನೀವು ವಾರ್ತಾಪತ್ರಿಕೆ ಓದಿದರೆ ಅವನು ಖುಷಿಪಟ್ಟಾನು. ಒಂಟಿತನದಿಂದ ನರಳುತ್ತಿರುವ ಐಶ್ವರ್ಯವಂತನೊಬ್ಬನ ಜೊತೆ ನೀವು ಮಾತನಾಡಿದರೆ, ಕಷ್ಟಸುಖ ವಿಚಾರಿಸಿದರೆ ಅವನಿಗಾಗುವ ಸುಖ

ಬೆಲೆ ಕಟ್ಟಲಾಗದ್ದು. ಮದರ್ ಮೇಲಿಂದ ಮೇಲೆ ಹೇಳುವರು : ಅವರಿಗೆ ಬೇಕಾಗಿರುವುದು ತಮ್ಮನ್ನು ಪ್ರೀತಿಸುವ ಹೃದಯ. ಒಂಟಿಜೀವನದಿಂದ ಬದುಕು ಅಸಹನೀಯವಾದವರ ಪಾಲಿಗೆ ಮದರ್ ಸಂಜೀವಿನಿಯಾದುದನ್ನು ಕೆಳಗಿನ ನಾಲ್ಕು ಪ್ರಸಂಗಗಳ ಮೂಲಕ, ಅವರ ಮಾತುಗಳಲ್ಲೇ ನಾವು ತಿಳಿಯಬಹುದಾಗಿದೆ.

೧

ಒಂದು ದಿನ ನಾನು ಮಹಿಳೆಯೊಬ್ಬಳು ಸುಡುತ್ತಿರುವ ಜ್ವರದಿಂದ ನರಳುತ್ತಿರುವುದನ್ನು ನೋಡಿದೆ. ಸಾಯುವ ಸ್ಥಿತಿಯಲ್ಲಿದ್ದ ಅವಳು ನನ್ನ ಮಗ ನನ್ನನ್ನು ಈ ಸ್ಥಿತಿಗೆ ತಂದನು'' ಎಂದು ಪದೇಪದೇ ಹೇಳುತ್ತಿದ್ದಳು. ನನ್ನ ತೋಳುಗಳಿಗೆ ಆನಿಸಿಕೊಂಡು ನಾನು ಅವಳನ್ನು ಕಾನ್ವೆಂಟ್‌ಗೆ ಕರೆದುಕೊಂಡು ಮೆಲ್ಲಮೆಲ್ಲನೆ ಬಂದೆ. ಹಾಗೆ ಬರುವಾಗ ದಾರಿಯಲ್ಲಿ ನಾನು ಅವಳನ್ನು ಮಗನ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡೆ. ಸ್ವಲ್ಪ ಕಾಲ ಬಿಟ್ಟು ಅವಳು ಹೇಳುವುದನ್ನು ಕೇಳಿದೆ "ಸರಿ, ನಾನು ಅವನನ್ನು ಕ್ಷಮಿಸುವೆನು'' ಅವಳು ತಾನು ಇನ್ನೇನು ಸಾಯುವೆ ಎನ್ನುವಾಗ ಕ್ಷಮಿಸುವೆನೆಂದು ಹೇಳಿದಳು. ಅವಳ ಹೃದಯ ಬಿರಿಯುತ್ತಿದ್ದುದಕ್ಕೆ ಕಾರಣ, ಅವಳ ಮಗ ತನ್ನನ್ನು ಪ್ರೀತಿಸದಿರುವುದು.

೨

ಕೆಲವು ದಿನಗಳ ಹಿಂದೆ ರೋಮ್‌ನಲ್ಲಿ ನಮ್ಮ ಸಿಸ್ಟರ್‌ಗಳು ಯಾರೋ ಒಬ್ಬನು ಕರುಣಾಮಯ ಪರಿಸ್ಥಿತಿಯಲ್ಲಿರುವುದನ್ನು ಕಂಡರು. ಅವನು ತನ್ನ ಸುತ್ತಲಿನ ಸಮಾಜದ ಸಂಪರ್ಕ ಕಡಿದುಕೊಂಡು ಒಂಟಿಯಾಗಿದ್ದನು. ನನಗೆ ತಿಳಿದಿರುವಂತೆ ನಮ್ಮ ಸಿಸ್ಟರ್‌ಗಳು ಅಂತಹದನ್ನು ಹಿಂದೆಂದೂ ನೋಡಿರಲಿಲ್ಲ. ಅವರು ಅವನ ಬಟ್ಟೆ ತೊಳೆದರು, ಅವನ ಕೋಣೆಯನ್ನು ಶುಚಿಗೊಳಿಸಿದರು, ಅವನಿಗಾಗಿ ಸ್ವಲ್ಪ ಬಿಸಿನೀರನ್ನು ಸಿದ್ಧಪಡಿಸಿದರು, ಅವನಿಗಾಗಿ ಸ್ವಲ್ಪ ಅಡುಗೆಯನ್ನೂ ಮಾಡಿದರು. ಆದರೂ ಅವನು ಮೌನಿಯಾಗಿದ್ದ. ಕೃತಜ್ಞತೆಯ

ಒಂದು ಮಾತನ್ನೂ ಅವನು ಹೇಳಲಿಲ್ಲ. ಸಿಸ್ಟರ್‌ಗಳು ದಿನಕ್ಕೆ ಎರಡು ವೇಳೆ ಅವನ ಮನೆಗೆ ಹೋಗಲು ತೀರ್ಮಾನಿಸಿದರು. ಕೆಲ ದಿನಗಳ ನಂತರ ಅವನು ತನ್ನ ಮೌನವನ್ನು ಮುರಿದು "ಸೋದರಿಯರೆ, ನೀವು ನನ್ನ ಬಾಳಿಗೆ ದೇವರನ್ನು ತಂದಿರಿ. ದಯಮಾಡಿ ನನಗಾಗಿ ಓರ್ವ ಪಾದ್ರಿಯನ್ನು ಕರೆದುಕೊಂಡು ಬನ್ನಿ'' ಎಂದನು.

ಪಾದ್ರಿಯ ಎದಿರು ಅವನು ತಪ್ಪೊಪ್ಪಿಗೆಯನ್ನು – ಅದೂ ಅರವತ್ತು ವರ್ಷಗಳ ನಂತರ – ಹೇಳಿಕೊಂಡ. ಮರುದಿನ ಅವನು ಪ್ರಾಣ ಬಿಟ್ಟ

೩

"ಆಸ್ಟ್ರೇಲಿಯಾದಲ್ಲಿ ವಯಸ್ಸಾದ ಬಡವನೊಬ್ಬನಿದ್ದನು. ಎಲ್ಲರೂ ಅವನನ್ನು ಕಡೆಗಣಿಸಿದ್ದರು. ಅವನ ಮನೆ ಅವ್ಯವಸ್ಥೆಯಿಂದ ಕೂಡಿದ್ದಿತು, ಕೊಳಕಾಗಿದ್ದಿತು. ನಾನು ಅವನಿಗೆ ಹೇಳಿದೆ : "ದಯಮಾಡಿ ನಿಮ್ಮ ಮನೆಯನ್ನು ಶುಚಿಮಾಡುವ, ನಿಮ್ಮ ಬಟ್ಟೆ ತೊಳೆಯುವ, ನಿಮ್ಮ ಹಾಸಿಗೆ ಸರಿಪಡಿಸುವ ಕೆಲಸ ಮಾಡಲು ನನಗೆ ಅವಕಾಶಕೊಡಿ.''

ಅದಕ್ಕೆ ಅವನೆಂದ : "ನಾನು ಹೀಗೆಯೇ ಇರುವುದು. ನನ್ನ ಮನೆ ಇರುವಂತೆಯೇ ಇರಲಿ.''

ನಾನು ಮತ್ತೆ ಕೇಳಿದೆ : "ನೀವು ನನಗೆ ಕೆಲಸ ಮಾಡಲು ಅನುಮತಿಸಿದರೆ ನೀವು ಇನ್ನಷ್ಟು ಚೆನ್ನಾಗಿರಬಹುದು.'' ಕೊನೆಗೆ ಅವನು ಒಪ್ಪಿದ. ಹೀಗಾಗಿ ನಾನು ಮನೆ ಶುಚಿಗೊಳಿಸಲು, ಬಟ್ಟೆ ತೊಳೆಯಲು ಸಾಧ್ಯವಾಯಿತು. ಆ ಮನೆಯಲ್ಲಿ ಧೂಳುತುಂಬಿದ ಒಂದು ಸೊಗಸಾದ ದೀಪ ನನ್ನ ಕಣ್ಣಿಗೆ ಬಿದ್ದಿತು. ಎಷ್ಟು ವರ್ಷಗಳಾಗಿದ್ದುವೋ ಅದನ್ನು ಉರಿಸಿ. ನಾನು ಕೇಳಿದೆ. "ನೀವು ಆ ದೀಪ ಹಚ್ಚುತ್ತಿಲ್ಲವೆ ? ಎಂದೂ ಅದನ್ನು ಉಪಯೋಗಿಸಿಲ್ಲವೆ?''

ಅವನು ಉತ್ತರಿಸಿದ. "ಇಲ್ಲ, ಯಾರೂ ನನ್ನನ್ನು ನೋಡಲು ಬರುತ್ತಿರಲಿಲ್ಲ. ನನಗೆ ಅದನ್ನು ಹಚ್ಚುವ ಅವಕಾಶವೇ ಬರಲಿಲ್ಲ. ನಾನು ಯಾರಿಗಾಗಿ ಅದನ್ನು ಹಚ್ಚಲಿ?'' ನಾನು ಕೇಳಿದೆ. "ನನ್ನ ಸಿಸ್ಟರ್‌ಗಳು ನಿತ್ಯವೂ ಬಂದರೆ ನೀವು ಅದನ್ನು ಹಚ್ಚುವಿರಾ?''

ಅವನು ಹೇಳಿದ: "ಆಗಬಹುದು.''

ಅಂದಿನಿಂದ ನಿತ್ಯವೂ ಸಂಜೆ ತಪ್ಪದೆ ಸಿಸ್ಟರ್‌ಗಳು ಅವನಲ್ಲಿಗೆ ಹೋಗಲು ತೊಡಗಿದರು. ನಾನು ಸಿಸ್ಟರ್‌ಗಳು ನಿತ್ಯವೂ ಸಂಜೆ ದೀಪ ಹಚ್ಚಲಿ ಎಂದು ಅದನ್ನು ಶುಚಿಗೊಳಿಸಿದೆನು. ಎರಡು ವರ್ಷಗಳು ಉರುಳಿದವು. ನಾನು ಸಂಪೂರ್ಣವಾಗಿ ಆತನನ್ನು ಮರೆತೆ -- ನನ್ನ ಕೆಲಸಗಳ ಒತ್ತಡದಲ್ಲಿ.

ಅವನು ನಮ್ಮನ್ನು ಮರೆಯಲಿಲ್ಲ. ಒಂದು ದಿನ ಅವನಿಂದ ಸಂದೇಶ ಬಂದಿತು : "ನನ್ನ ಬಾಳಿನಲ್ಲಿ ಹಚ್ಚಿದ ದೀಪ ದಿವ್ಯಪ್ರಭೆಯಿಂದ ಕೂಡಿ ಬೆಳಗುತ್ತಿದೆ, ಧನ್ಯವಾದಗಳು.''

"ನಾನಿದನ್ನು ಸಣ್ಣ ವಿಷಯವೆಂದು ಭಾವಿಸಿದ್ದೆ. ನಾವು ಬಹಳಷ್ಟು ಸಲ ಸಣ್ಣ ವಿಷಯಗಳನ್ನು ಕಡೆಗಣಿಸುತ್ತೇವೆ'' ಎಂದು ಮದರ್ ಥೆರೆಸಾ ಹೇಳಿದರು – ಭಾವುಕರಾಗಿ.''

೪

ಇನ್ನೊಂದು ಘಟನೆಯನ್ನು ಮದರ್ ಥೆರೆಸಾ ಹೇಳುವರು:

"ಕೆಲವು ದಿವಸಗಳ ಹಿಂದೆ ವ್ಯಕ್ತಿಯೊಬ್ಬ ನನ್ನ ಬಳಿ ಬಂದು "ನೀವು ಮದರ್ ಥೆರೆಸಾ ತಾನೆ ?'' ಎಂದು ಕೇಳಿದ. ನಾನು ಹೌದೆಂದೆ. ಅವನು ಹೀಗೆ ವಿನಂತಿಸಿದ: "ದಯಮಾಡಿ ನಿಮ್ಮ ಸಿಸ್ಟರ್‌ಗಳಲ್ಲಿ ಒಬ್ಬರನ್ನು

ನಮ್ಮ ಮನೆಗೆ ಕಳುಹಿಸಿ. ನಾನು ಅರೆಕುರುಡ. ನನ್ನ ಪತ್ನಿ ಬುದ್ಧಿಮಾಂದ್ಯದ ಅಂಚಿನಲ್ಲಿರುವಳು. ನಾವು ಬಹಳ ದಿವಸಗಳಿಂದ ಮನುಷ್ಯರ ಧ್ವನಿಯನ್ನು ಕೇಳಬಯಸಿರುವೆವು.''

ನಾನು ಸಿಸ್ಟರ್‌ಗಳನ್ನು ಕಳುಹಿಸಿದೆ. ಅವರಿಗೆ ವಾಸ್ತವ ಸ್ಥಿತಿ ತಿಳಿಯಿತು. ಆ ದಂಪತಿಗಳು ಬಡವರೇನಲ್ಲ. ಆದರೆ ಅವರ ಬಳಿ ಹತ್ತಿರದ ಬಂಧುಗಳಾರೂ ಇರಲಿಲ್ಲ. ಆ ಯಾತನೆ ಅವರನ್ನು ಉಸಿರುಗಟ್ಟಿಸಿತ್ತು. ತಾವು ಯಾರಿಗೂ ಬೇಡವಾಗಿರುವೆವೆಂದು, ಅಪ್ರಯೋಜಕರೆಂದು, ಲಾಭದಾಯಿಗಳಲ್ಲವೆಂದು ಅನ್ನಿಸಿತ್ತು. ಈ ಭಾವನೆಯಿಂದಾಗಿ ಅವರಿಗೆ ಬದುಕು ಬೇಡವಾಗಿತ್ತು.''

ಮದ್ಯಪಾನದಿಂದ ಬಿಡುಗಡೆ

ಮದ್ಯಪಾನದಿಂದ ಅನೇಕ ಕುಟುಂಬಗಳ ನೆಮ್ಮದಿ ಹಾಳಾಗಿರುವುದನ್ನು ಮದರ್ ಥೆರೆಸಾ ಬಲ್ಲರು. ಇದನ್ನು ವ್ಯಸನವಾಗಿ ಹೊಂದಿರುವವರು ಭಾರತದಲ್ಲೂ ಇರುವರು, ಬೇರೆ ದೇಶಗಳಲ್ಲೂ ಇರುವರು. ಮದ್ಯಪಾನ ಮಾಡುವವರು ಅದಕ್ಕೆ ದಾಸರಾಗಿ ತಮ್ಮ ಆರೋಗ್ಯವನ್ನು ಹಾಳುಮಾಡಿ ಕೊಂಡಿದ್ದಲ್ಲದೆ ಸಾಮಾಜಿಕವಾಗಿ ನಿಂದನೆಗೆ ಗುರಿಯಾಗುತ್ತಿದ್ದರು; ಮನೆಯನ್ನು ತೊರೆದು ಬಂಧು ಬಾಂಧವರ ಪ್ರೀತಿಯನ್ನೂ ಕಳೆದುಕೊಳ್ಳುತ್ತಿದ್ದರು. ಮಾನಸಿಕವಾಗಿ ರೋಗಿಯಾಗಿರುತ್ತಿದ್ದ ಇವರಿಗೆ ಪ್ರೀತಿ ಕರುಣೆಯನ್ನು ತೋರಿಸಿ ಮದ್ಯಪಾನ ವ್ಯಸನದಿಂದ ಇವರನ್ನು ಬಿಡುಗಡೆ ಮಾಡುವ ಜವಾಬ್ದಾರಿಯನ್ನು ಮದರ್ ಥೆರೆಸಾ ಹೊತ್ತಿದ್ದರು. ಅವರ 'ಹೋಂ ಆಫ್ ಕಂಪಾಶನ್' ಮದ್ಯಪಾನದಿಂದ ಸಾಮಾಜಿಕ ನಿಂದನೆಗೆ ಗುರಿಯಾದವರಿಗೆ ಪ್ರೀತಿ–ಕರುಣೆ ತೋರುವ ನೆಲೆ. ಮೆಲ್‌ಬೋರ್ನ್‌ನಲ್ಲಿ ಮದರ್ ಥೆರೆಸಾ ಮದ್ಯಪಾನಿಯೊಬ್ಬನನ್ನು ಅವನ ಚಟದಿಂದ ಬಿಡುಗಡೆ ಮಾಡಿದ ಪ್ರಸಂಗ ಹೀಗಿದೆ: ಹಲವು ವರ್ಷಗಳಿಂದ ಮದ್ಯಪಾನದ ಚಟವಿದ್ದ ಒಬ್ಬನನ್ನು ಸಿಸ್ಟರ್‌ಗಳು ಮೆಲ್‌ಬೋರ್ನ್‌ನ ರಸ್ತೆಯಿಂದ ತೆಗೆದುಕೊಂಡು ಬಂದು ಅವನನ್ನು 'ಹೋಂ ಆಫ್ ಕಂಪಾಶನ್'ನಲ್ಲಿ ಇರಿಸಿದರು. ಅವನನ್ನು

ಸಿಸ್ಟರ್‌ಗಳು ಸ್ಪರ್ಶಿಸಿದ ರೀತಿ ಹಾಗೂ ಆರೈಕೆ ಮಾಡಿದ ರೀತಿಯನ್ನು ಕಂಡು ಆ ಕ್ಷಣವೇ ಅವನಲ್ಲಿ 'ತನ್ನನ್ನು ದೇವರು ಪ್ರೀತಿಸುತ್ತಿರುವ'ನೆಂಬ ಭಾವನೆ ಯುಂಟಾಯಿತು. ಅವನು ಮನೆಗೆ ಹಿಂತಿರುಗಿದ ಮೇಲೆ ಮತ್ತೆ ಮದ್ಯವನ್ನು ಮುಟ್ಟಲಿಲ್ಲ.

ಕುಷ್ಠರೋಗಿಗಳ ಸೇವೆ

ಕುಷ್ಠರೋಗಕ್ಕೆ ಬಲಿಯಾದವರ ಬಗೆಗೆ ಮದರ್ ಥೆರೆಸಾ ಅವರ ಪ್ರೀತಿ ಉಕ್ಕಿ ಹರಿಯುತ್ತದೆ. ಅವರು ಹೇಳುವಂತೆ "ನಮಗೆ ಬಾಂಬುಗಳ ಅಥವಾ ಆಯುಧಗಳ ಅಗತ್ಯವಿಲ್ಲ. ಪ್ರೀತಿ ನಮ್ಮ ಆಯುಧ: ಕುಷ್ಠರೋಗಿಗಳ, ಹಿರಿಯರ, ಸಾಯುತ್ತಿರುವವರ, ಪಾರ್ಶ್ವವಾಯುಪೀಡಿತರ ಕಡೆಗೆ, ಯಾರೂ ಇಲ್ಲದವರ ಕಡೆಗೆ ಮತ್ತು ಯಾರೂ ಪ್ರೀತಿಸದೆ ಇರುವವರ ಕಡೆಗೆ ನಮ್ಮ ಪ್ರೀತಿ ಹೊರಳಬೇಕು".

ಕಲ್ಕತ್ತಾದಲ್ಲೇ ಸಾವಿರಾರು ಕುಷ್ಠರೋಗಿಗಳನ್ನು ರಸ್ತೆಯ ಬದಿಯಿಂದ ತೆಗೆದು ತರಲಾಗಿದೆ. ಮದರ್ ಥೆರೆಸಾ ಅವರು ಹೀಗೆ ಹೇಳುವರು: "ನನಗೆ ಅವರುಗಳು ತಿಳಿದಿರುವುದು; ವ್ಯಕ್ತಿಗಳಾಗಿಯೇ ಹೊರತು ಕುಷ್ಠರೋಗಿಗಳಾಗಿಯಲ್ಲ. ನಾನು ಅವರನ್ನು ಕುಷ್ಠರೋಗಿಗಳೆಂದು ಭಾವಿಸುವುದಿಲ್ಲ, ವ್ಯಕ್ತಿಯಾಗಿ ಸ್ವಂತ ಹೆಸರನ್ನುಳ್ಳವರು ಎಂದು ಭಾವಿಸುವೆ. ಅವರ ಕೆಲಸ ಪ್ರೀತಿಯ ಕೆಲಸ. ಅದು ದೇವರ ಕೃಪೆಯ ಫಲ, ಅದು ದೇವರ ಸಂಕೇತ".

ಕುಷ್ಠರೋಗಿಗಳು ನಮ್ಮಂತೆಯೇ ಮನುಷ್ಯರು. ಅವರಿಗೂ ಭಾವನೆಗಳಿವೆ, ನೋವು ಸಂಕಟಗಳಿವೆ. ಅವರು ಮನೆಯನ್ನು, ಹೆಂಡತಿ ಮಕ್ಕಳನ್ನು ಬಿಟ್ಟು ಲೆಪ್ರೊಸಾರಿಯಂಗೆ ಒಂಟಿಯಾಗಿ ಬರುವಾಗ ಅವರ ಮನಸ್ಸಿನ ಸಂಕಟವನ್ನು ನೋವನ್ನು ಮಾತಿನಲ್ಲಿ ಹೇಳಲಾಗದು. ಲೆಪ್ರೊಸಾರಿಯಂನಲ್ಲಿ ಕಂಡುಬರುವ ಕರುಣೆ ಉಕ್ಕಿಸುವ ದೃಶ್ಯಗಳು ನೋಡುವವರ ಹೃದಯ ಹಿಂಡುತ್ತವೆ. ಅಲ್ಲಿನ

ಮಹಿಳೆಯೊಬ್ಬಳು ಹೇಳುವಂತೆ ಅವಳ ಪುಟ್ಟ ಮಗಳಿಗೂ ಕುಷ್ಠವಿದೆ. ಆ ತಾಯಿ ತನ್ನ ಮಗಳ ಜೊತೆ ಇರುವ ಮೊದಲು ಅವಳಿಗೆ ಒಬ್ಬ ಕುಷ್ಠರೋಗದ ಮಗನಿದ್ದನು. ಆ ಹುಡುಗಿಯ ತಂದೆ ಮಗಳನ್ನು ನೋಡಲು ಬಂದನು. ಪುಟ್ಟ ಹುಡುಗಿ ತೆವಳುತ್ತ ಅವನತ್ತ ಬಂದಿತು. ಅವನ ತೋಳುಗಳಿಗೆ ಜಿಗಿದು ಪ್ರೀತಿ ಪಡೆಯಬೇಕೆಂಬ ಆಸೆ ಆ ಮಗುವಿನದು. ಕೆಲಕ್ಷಣ ತಂದೆಯ ಮಂಡಿ ಹಿಡಿದು ನಿಂತು. ತನ್ನ ಸ್ಥಿತಿಯನ್ನು ನೆನೆದು ಆ ಮಗು ಸಂಕಟದಿಂದ ತಂದೆಯ ಕಡೆ ನೋಡಿತು. ಆ ಎಳೆಯ ಮಗುವಿನ ಶರೀರ ಕುಷ್ಠರೋಗದ ಹೊಡೆತದಿಂದಾಗಿ ವಿಕಾರವಾಗಿದೆ, ಉತ್ಸಾಹ ಬತ್ತಿಹೋಗಿದೆ. ಇಂತಹ ದೃಶ್ಯಗಳು ಪುನರಾವೃತ್ತಿಯಾದಾಗ ಮದರ್ ಥೆರೆಸಾ ಹೇಳುತ್ತಿದ್ದರು : ಕುಷ್ಠರೋಗ ಅತ್ಯಂತ ಕೆಟ್ಟರೋಗವೇನಲ್ಲ, ಅವರುಗಳಿಗೆ ಬೇಕಾಗಿರುವುದು ಪ್ರೀತಿ. ಮದರ್ ಥೆರೆಸಾ ಪ್ರತಿ ವರ್ಷ ಕ್ರಿಸ್‌ಮಸ್‌ನಲ್ಲಿ ಕುಷ್ಠರೋಗಿಗಳಿಗೆ ಒಂದು ಔತಣ ಕೊಡುವರು.

ಮಕ್ಕಳ ಪಾಲನೆ

'ಪ್ರೀತಿ ಮನೆಯಿಂದ ಆರಂಭವಾಗುತ್ತದೆ' ಎಂದು ಹೇಳುವ ಮದರ್ ಥೆರೆಸಾ ವಿಶ್ವದ ಎಲ್ಲ ದುಃಖಗಳಿಗೂ ಮೂಲವನ್ನು ಅತ್ಯಂತ ಸ್ಪಷ್ಟವಾಗಿ ಮನೆಯಲ್ಲಿಯೇ ಕಾಣುವರು. ಪರಸ್ಪರ ನೋಡಲು ನಮಗೆ ಸಮಯವಿಲ್ಲ, ಶುಭಾಶಯಗಳನ್ನು ವಿನಿಮಯಮಾಡಿಕೊಳ್ಳಲು, ಸಂತೋಷದ ಒಂದು ಕ್ಷಣವನ್ನು ಹಂಚಿಕೊಳ್ಳಲು ನಮಗೆ ಸಮಯವಿಲ್ಲ. ನಮ್ಮ ಮನೆಯವರು ನಮ್ಮೊಡನೆ ಇರಲು, ಸಂತೋಷವನ್ನು ಪಡೆಯಲು ಎಷ್ಟು ಸಮಯ ಅಪೇಕ್ಷಿಸುವರೋ ಅದಕ್ಕಿಂತಲೂ ಕಡಿಮೆ ಸಮಯವನ್ನು ನಾವು ಕೊಡುವೆವು. ಹೀಗಾಗಿ ನಾವು ನಿತ್ಯವೂ ನಮ್ಮ ಮನೆಗೆ ಹೆಚ್ಚು ಹೆಚ್ಚು ಪರಕೀಯರಾಗುತ್ತಿದ್ದೇವೆ, ನಮ್ಮ ಮನೆಯೊಳಗಿನ ಸಂಪರ್ಕ ಕಡಿಮೆಯಾಗುತ್ತಿದೆ.

ನಮ್ಮ ದೇಶದಲ್ಲಿ ಬಡತನದಿಂದಾಗಿ ಮಕ್ಕಳು ಸಾಯುತ್ತಿವೆ. ಇನ್ನೊಂದು ಜೀವಕ್ಕೆ ಅನ್ನ ನೀಡಲು, ವಿದ್ಯಾಭ್ಯಾಸ ಕೊಡಿಸಲು ಬಡತನ

ಅಡ್ಡಿಯಾಗಿದೆ. ಬಡತನ ಇಲ್ಲಿ ಶಾಪವಾಗಿದೆ. ಮಕ್ಕಳನ್ನು ಸಾಕಲಾಗದವರು ರಸ್ತೆಯಲ್ಲಿ ಬಿಟ್ಟುಹೋಗುವರು, ತಂದೆ–ತಾಯಿಗಳಿಲ್ಲದ ತಬ್ಬಲಿಗಳು ಬೀದಿಗೆ ಬೀಳುವರು, ಅನೈತಿಕವಾಗಿ ಹುಟ್ಟಿದ ಮಗುವನ್ನು ತಾಯಿ ಬಿಟ್ಟುಹೋಗುವಳು. ಈ ಮಕ್ಕಳು ಪಾಪವನ್ನೇ ಅರಿಯದ ಮುಗ್ಧರು. ಇವರಿಗೆ ಒಂದು ನೆಲೆ ಒದಗಿಸಿ, ಒಳ್ಳೆಯ ಶಿಕ್ಷಣ ಕೊಟ್ಟು ಒಳ್ಳೆಯ ಪ್ರಜೆಗಳನ್ನಾಗಿ ಮಾಡುವ ಜವಾಬ್ದಾರಿಯನ್ನು ಮದರ್ ಥೆರೆಸಾ ಹೊತ್ತಿರುವರು. ಇಂತಹ ಮಕ್ಕಳಿಗಾಗಿ ಅನಾಥಾಲಯಗಳನ್ನು ವಿಶ್ವದಾದ್ಯಂತ ತೆರೆದಿರುವರು. ಕೊಳೆಗೇರಿಗಳಲ್ಲಿ ಬಡತನದಿಂದಾಗಿ ಎಳೆಯ ಜೀವಗಳು ಸಾಯಬಾರದೆಂದು ಅವುಗಳಿಗೆ ಯೋಗ್ಯ ಚಿಕಿತ್ಸೆ ನೀಡುತ್ತಿರುವರು; ಆ ಬಾಲಕರು ಒಳ್ಳೆಯ ಶಿಕ್ಷಣ ಪಡೆಯಬೇಕೆಂದು ಕೊಳೆಗೇರಿಗಳ ಸಮೀಪವೇ ಶಾಲೆಗಳನ್ನು ತೆರೆದಿರುವರು.

ಬಡತನದಿಂದಾಗಿ ಮಗುವೊಂದು ಪ್ರಾಣಬಿಟ್ಟಿತು. ಆ ಮಗು ದೇವರ ಸೃಷ್ಟಿ ದೇವರ ಮಗು. ನಾವು ಒಂದಲ್ಲಾ ಒಂದು ದಿವಸ ವಿಶ್ವದ ಒಡೆಯನಲ್ಲಿಗೆ ಹೋಗಿ ಅವನನ್ನು ಸಂಧಿಸುತ್ತೇವೆ. ಆಗ ನಾವು ಆ ಮಗುವಿನ ಬಗೆಗೆ ಏನು ಹೇಳುವುದು? ಎನ್ನುವ ಚಿಂತೆ ಮದರ್ ಥೆರೆಸಾ ಅವರದು. "ದೇವರು ತನ್ನೆಲ್ಲ ಪ್ರೀತಿಯನ್ನು ಆ ಮಾನವ ಜೀವದ ಸೃಷ್ಟಿಯಲ್ಲಿ ಧಾರೆಯೆರೆದಿರುವನು. ಆದಕಾರಣ, ನಮಗೆ ಅದನ್ನು ಹಾಳುಮಾಡುವ ಹಕ್ಕಿಲ್ಲ" ಎನ್ನುವರು ಅವರು. ಕೊಳೆಗೇರಿಗಳಲ್ಲಿ ಹೆಚ್ಚು ಹೆಚ್ಚು ಎಳೆಯವಯಸ್ಸಿನ ತಾಯಂದಿರು ಸಾಯುವುದನ್ನೂ, ಮಕ್ಕಳು ಕುರೂಪಿಗಳಾಗಿ ಹುಟ್ಟುವುದನ್ನೂ ಕಂಡ ಅವರು ಅದಕ್ಕೆ ಕಾರಣವೇನಿರಬಹುದೆಂದು ವಿಚಾರ ಮಾಡಿರುವರು: ಮಹಿಳೆಯರು ಓದುಬರಹ ಬಾರದೆ ಅಜ್ಞಾನಿಗಳಾಗಿರುವುದರಿಂದ ಪುರುಷರು ಇದರ ಲಾಭ ಪಡೆದುಕೊಳ್ಳುತ್ತಿರುವರು. ಸಮಾಜವೂ ಮಹಿಳೆ ದುರ್ಬಲಳೆಂದು ಅವಳಿಗೆ ಸ್ವಾತಂತ್ರ್ಯ ಕೊಟ್ಟಿಲ್ಲ. ಮಹಿಳೆಯರ ಸಮಸ್ಯೆಯನ್ನು ಸಮಾಜ ಅರ್ಥಮಾಡಿಕೊಂಡು ಅವರಿಗೆ ಸಹಾಯಮಾಡಬೇಕು. ಮಹಿಳೆಯರ ಕಷ್ಟಗಳನ್ನು ಸಹಾನುಭೂತಿಯಿಂದ ನೋಡುವ, ಅವರಿಗೆ ಸಹಾಯಮಾಡುವ ಒಳ್ಳೆಯ ಮಹಿಳೆಯೊಬ್ಬಳನ್ನು ಕಳುಹಿಸುವಂತೆ ಮದರ್ ಥೆರೆಸಾ ದೇವರಲ್ಲಿ ಬೇಡಿಕೊಂಡರು. ಅವರ ಆಸೆ

ದೇವರಿಗೆ ತಿಳಿಯಿತು. ಅವರಿಗೆ ಬೇಕಾಗಿದ್ದ ಸಿಸ್ಟರ್ ಒಬ್ಬಳು ಮಾರಿಷಸ್ ದ್ವೀಪದಿಂದ ಬಂದಳು. ಅವಳು ಸಹಜ ಕುಟುಂಬ ಯೋಜನೆಯಲ್ಲಿ ಒಳ್ಳೆಯ ಶಿಕ್ಷಣ ಪಡೆದಿದ್ದಳು. ಅವಳು ಕುಟುಂಬ ಯೋಜನೆಯ ಬಗೆಗೆ ಮಹಿಳೆಯರಿಗೆ ಸರಿಯಾದ ತಿಳುವಳಿಕೆ ಕೊಟ್ಟಳು. ಇದರಿಂದ ಒಳ್ಳೆಯ ಪರಿಣಾಮವಾಯಿತು. ಎಷ್ಟೋ ಕುಟುಂಬಗಳಲ್ಲಿ ನೆಮ್ಮದಿ ಕಾಣಿಸಿಕೊಂಡಿತು. ತಮಗೆ ಬೇಕಾದಾಗ ಮಗುವನ್ನು ಪಡೆಯುವ ಅವಕಾಶ ದೊರೆತದ್ದಕ್ಕೆ ಸಂತೋಷಗೊಂಡ ಜನ ಮದರ್ ಥೆರೆಸಾ ಬಳಿ ಬಂದು ತಮ್ಮ ಕೃತಜ್ಞತೆ ಸಲ್ಲಿಸಿದರು.

ಅತಿಸಂತಾನದಿಂದಾಗಿ ವಿಶ್ವದ ಜನತೆ ಅನೇಕ ಸಮಸ್ಯೆಗಳಿಗೆ ಒಳಗಾಗಿರುವರು. ದೈವಾನುಗ್ರಹ ಹುಟ್ಟುವ ಎಲ್ಲ ಮಕ್ಕಳ ರಕ್ಷಣೆ ಮಾಡಲಾಗದು. ಈ ಸಮಸ್ಯೆಯ ಪರಿಹಾರ ಸಂತಾನಹರಣದಿಂದ ಸಾಧ್ಯವಿಲ್ಲವೆನ್ನುವುದು ಮದರ್ ಥೆರೆಸಾ ಅವರ ವಾದ. "ಯಾವುದಕ್ಕೂ ಕೊರತೆಯಿಲ್ಲದ ದೇಶಗಳಲ್ಲಿ ಭ್ರೂಣಹತ್ಯೆಗೆ ಒಪ್ಪಿಗೆ ಕೊಡುವುದಾದರೆ, ಅವು ನನ್ನ ಪ್ರಕಾರ ಕಡುಬಡವರಲ್ಲಿ ಬಡವರಾಗುವುವು.: ಅಂತಹ ದೇಶಗಳಲ್ಲಿ ನಾನು ಮಕ್ಕಳಿಗಾಗಿ ಹಲವು ಸಂಸ್ಥೆಗಳನ್ನು ತೆರೆಯಬಯಸುತ್ತೇನೆ. ಈ ಬಗೆಯ ಪುಟ್ಟ ಸಂಸ್ಥೆಗಳನ್ನು ನಾವು ಭಾರತಾದ್ಯಂತ ಹೊಂದಿರುವೆವು. ನಾವು ಇಲ್ಲಿಯವರೆವಿಗೆ ಯಾವುದೇ ಒಂದು ಮಗುವನ್ನು ತಿರಸ್ಕರಿಸುವ ಸಂದರ್ಭ ಬಂದಿಲ್ಲ. ದೇವರಿಗೆ ತಿಳಿದಿರುವಂತೆ ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ, ಹೆತ್ತವರ ಕೈಯಿಂದ ಮರಣವನ್ನಪ್ಪುವ ಮೊದಲೇ ಈ ಮಕ್ಕಳು ಹೊಸ ತಂದೆತಾಯಿಯರೊಂದಿಗೆ ಮನೆಯನ್ನು ಕಂಡುಕೊಂಡಿವೆ. ಕಲ್ಕತ್ತಾದಲ್ಲಿ ದತ್ತು ಸ್ವೀಕರಿಸುವ ಮೂಲಕ ಭ್ರೂಣಹತ್ಯೆ ತಪ್ಪಿಸುವ ಒಂದು ಹೋರಾಟ ನಡೆಸಿರುವೆವು. ತಂದೆ ಹಾಗೂ ತಾಯಿಯೆನ್ನಿಸಿಕೊಂಡು ಸಾಯಬೇಕೆಂದು ತೀರ್ಮಾನಿಸಿರುವವರಿಗೆ ನಾವು ಇಂತಹ ಮಕ್ಕಳನ್ನು ದತ್ತು ಕೊಡಲು ಸಾಧ್ಯವಾಗಿದೆ. ಭಾರತದಲ್ಲಿ ಕಾನೂನಿನ ಕಟ್ಟಳೆಯಿಂದಾಗಿ ಇಂತಹ ಮಕ್ಕಳು ಅಸ್ಪೃಶ್ಯರಾಗಿರುವುದು ಆಶ್ಚರ್ಯವಾಗಿ ಕಾಣುತ್ತದೆ. ಭ್ರೂಣಹತ್ಯೆ ಪಾಪದ ಕಾರ್ಯವೇನಲ್ಲವೆಂದು ಅದಕ್ಕೆ ಕಾನೂನಿನ ಒಪ್ಪಿಗೆ ದೊರಕಿಸಿಕೊಟ್ಟಿರುವ ದೇಶಗಳಿಗಾಗಿ ನಾವು ದೇವರಲ್ಲಿ ಪ್ರಾರ್ಥನೆ ಮಾಡಬೇಕಾಗಿದೆ. ಏಕೆಂದರೆ, ಅವರು ಮಾಡುತ್ತಿರುವ ಪಾಪ ಸಾಮಾನ್ಯವಾದುದಲ್ಲ, ಅದೊಂದು ಕೊಲೆ."

ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಳೆಯ ವಯಸ್ಸಿನ ಮಹಿಳೆಯರನ್ನು ಸೈನಿಕರು ಮಾನಭಂಗ ಮಾಡಿದರು. ಸೈನಿಕರಿಂದ ನಡೆದ ಅತ್ಯಾಚಾರದಲ್ಲಿ ಗರ್ಭಧರಿಸಿದ ಆ ಎಳೆಯ ಮಹಿಳೆಯರ ಸೇವೆ ಮಾಡಲೆಂದು ಬಾಂಗ್ಲಾದೇಶ ಮದರ್ ಥೆರೆಸಾ ಅವರನ್ನು ಆಹ್ವಾನಿಸಿತು. ಅದನ್ನು ಸ್ವೀಕರಿಸಿದ ಅವರು ಅಲ್ಲಿಗೆ ತಮ್ಮ ಕಾರ್ಯಕರ್ತರೊಂದಿಗೆ ಬಂದರು. ಮಕ್ಕಳಿಗಾಗಿ ಮನೆಯೊಂದನ್ನು ಪ್ರಾರಂಭಿಸುವ ಅಗತ್ಯ ಅವರಿಗೆ ತೋರಿತು. ಹಾಗೆ ಮಾಡಲು ಅವರಿಗೆ ಸಾಧ್ಯವಿರಲಿಲ್ಲ. ಏಕೆಂದರೆ, ಮಾನಭಂಗಕ್ಕೊಳಗಾದ ಎಳೆಯ ವಯಸ್ಸಿನ ಮಹಿಳೆಯರನ್ನು ಸಮಾಜ ಸ್ವೀಕರಿಸುವುದು ಹಿಂದೂ ಹಾಗೂ ಮುಸ್ಲಿಂ ಕಾನೂನುಗಳೆರಡಕ್ಕೂ ವಿರುದ್ಧವಾಗಿದ್ದಿತು. ಆದರೆ, ಆ ದೇಶದ ಪ್ರಧಾನಿ ಮುಜಿಬುರ್ ರೆಹಮಾನ್ "ಇವರು ತಮ್ಮ ಮಾನವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರು, ತಮ್ಮ ದೇಶಕ್ಕಾಗಿ ಹೋರಾಡಿದರು. ಈ ಮಹಿಳೆಯರು ರಾಷ್ಟ್ರೀಯ ವೀರರು'' ಎಂದು ಹೇಳಿದಾಗ, ಇವರ ತಂದೆತಾಯಿಯರು, ಸ್ವೀಕರಿಸಲು ಮುಂದೆ ಬಂದರು. ಅಷ್ಟೇ ಅಲ್ಲ, ಯುವಕರು ಇವರನ್ನು ಮದುವೆಯಾಗಲು ಮುಂದೆ ಬಂದರು. ನಂತರ ಕೆಲವರು ಇವರ ಭ್ರೂಣಹತ್ಯೆ ಮಾಡಬೇಕೆಂದರು. ಅದೊಂದು ಭಾರಿ ಯುದ್ಧ. ಮದರ್ ಥೆರೆಸಾ ಹೇಳಿದರು: "ಈ ಹುಡುಗಿಯರು ಬಲವಂತಕ್ಕೊಳಗಾಗಿ ಮಾನಭಂಗ ಹೊಂದಿರುವರೇ ಹೊರತಾಗಿ ಅವರು ಪಾಪವನ್ನು ಮಾಡಬೇಕೆಂದಿರಲಿಲ್ಲ. ತಾವು ತಾಯಿಯಾಗಿ ತಮ್ಮ ಎಳೆಯ ಕಂದಮ್ಮಗಳನ್ನು ಕೊಂದೆವೆಂಬ ಪಾಪಪ್ರಜ್ಞೆ ಅವರನ್ನು ಜೀವಿಸಿರುವವರೆವಿಗೂ ಕಾಡುವುದು.'' ಸರಕಾರ ಮದರ್ ಥೆರೆಸಾ ಅವರ ವಾದಕ್ಕೆ ಮಣಿಯಿತು. ಭ್ರೂಣಹತ್ಯೆಗೆ ಒಳಗಾಗಬೇಕೆಂದು ಬಯಸಿದ್ದ ತಾಯಿಯರ ಕಂದಮ್ಮಗಳನ್ನು ಮದರ್ ಥೆರೆಸಾ ಅವರ ಮನೆಗೆ ತರಬೇಕೆಂದು ಸರಕಾರ ಘೋಷಿಸಿತು. ಹಾಗೆ ಸ್ವೀಕರಿಸಿದ ನಲವತ್ತು ಮಕ್ಕಳಲ್ಲಿ ಮೂವತ್ತಕ್ಕೂ ಹೆಚ್ಚು ಮಕ್ಕಳನ್ನು ಕೆನಡಾ ಹಾಗೂ ಮತ್ತಿತರ ದೇಶಗಳ ಉದಾರ ಮನೋಭಾವದ ಕುಟುಂಬಗಳು ದತ್ತು ಸ್ವೀಕರಿಸಿದುವು. ಹೀಗೆ ಮದರ್ ಥೆರೆಸಾ ಅವರು ಭ್ರೂಣಹತ್ಯೆಯ ವಿರುದ್ಧ ದೊಡ್ಡ ಹೋರಾಟವನ್ನೇ ನಡೆಸಿದರು. ಮಾನವೀಯತೆಗೆ ಕೊನೆಗೂ ಜಯ ದೊರೆಯಿತು.

ನಂಬಿಕೆ ಮನುಷ್ಯರ ಪಾಲಿಗೆ ದೇವರ ಅನುಗ್ರಹ. ಅದಿಲ್ಲದೆ ಬದುಕಿಲ್ಲ. ನಮ್ಮ ಕಾರ್ಯ ಈಡೇರಬೇಕಾದರೆ, ದೇವರಿಗಾಗಿ ಎಲ್ಲವೂ ಆಗಬೇಕಾದರೆ, ಸುಂದರವಾಗಿರಬೇಕಾದರೆ ದೇವರ ನಂಬಿಕೆಯ ಮೇಲೆ ಅದು ಆಧಾರವಾಗಿರಬೇಕು. ಏಸುಕ್ರಿಸ್ತ ಹೇಳಿರುವನು: "ನಾನು ಹಸಿವೆಯಿಂದ ಕೂಡಿದ್ದೆ, ನಾನು ಬಟ್ಟೆಯಿಲ್ಲದವನಾಗಿದ್ದೆ, ನಾನು ರೋಗಿಯಾಗಿದ್ದೆ, ನಾನು ಮನೆಯಿಲ್ಲದವನಾಗಿದ್ದೆ ಮತ್ತು ನೀನು ನನಗೆ ಸಹಾಯ ಮಾಡು." ಮದರ್ ಥೆರೆಸಾ ಅವರು ಹೇಳುವಂತೆ ಏಸುವಿನ ಈ ಮಾತುಗಳು ಅವರ ಎಲ್ಲ ಕಾರ್ಯಗಳಿಗೆ ಪ್ರೇರಣೆ.

ಮದರ್ ಥೆರೆಸಾ ಅವರಿಗೆ ದೇವರು ದಯಾಳು ಎಂಬುದರಲ್ಲಿ ಅಪಾರವಾದ ನಂಬಿಕೆ. ಅವರ ನಂಬಿಕೆ ಎಂದೂ ಸುಳ್ಳಾಗಿಲ್ಲ. ಅದಕ್ಕೆ ಅವರ ಬದುಕಿನಲ್ಲಿ ನಡೆದ ಘಟನೆಗಳೇ ಸಾಕ್ಷಿ:

ಮದರ್ ಥೆರೆಸಾ ಅವರು ನಿತ್ಯವೂ ಏಳುಸಾವಿರ ಮಂದಿ ಬಡವರಿಗೆ ಊಟ ಹಾಕಬೇಕಾಗಿತ್ತು. ಒಂದು ದಿವಸ ಒಲೆ ಹಚ್ಚಲಿಲ್ಲವೆಂದರೆ ಅವರೆಲ್ಲರೂ ಹಸಿವೆಯಿಂದ ಮಲಗಬೇಕಾಗುತ್ತಿತ್ತು. ಒಮ್ಮೆ ಹೀಗಾಯಿತು. ಅಕ್ಕಿ ಮೂಟೆ ತುಂಬಿದ್ದ ಕೊಠಡಿಯಲ್ಲಿ ಸಾಕಷ್ಟು ಅಕ್ಕಿಯಿರಲಿಲ್ಲ: ಗಾಬರಿಗೊಂಡ ಸಿಸ್ಟರ್‌ಗಳು ಮದರ್ ಥೆರೆಸಾ ಅವರ ಬಳಿ ಬಂದು, ಶುಕ್ರವಾರ ಮತ್ತು ಶನಿವಾರಗಳಿಗೆ ಅಕ್ಕಿಯಿಲ್ಲ ಎಂದರು. ಅಂತಹ ಮಾತನ್ನು ಅವರು ಹಿಂದೆಂದೂ ಕೇಳಿರಲಿಲ್ಲ, ಕೇಳಬೇಕಾಗಿಯೂ ಇರಲಿಲ್ಲ. ಮದರ್ ಧೈರ್ಯ ಕಳೆದುಕೊಳ್ಳಲಿಲ್ಲ, ದೇವರನ್ನು ಪ್ರಾರ್ಥಿಸಿದರು. ಆಶ್ಚರ್ಯ! ಶುಕ್ರವಾರ ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಯ ವೇಳೆಗೆ ಒಂದು ಟ್ರಕ್ ತುಂಬ ಬ್ರೆಡ್ ಬಂದಿತು. ಸರಕಾರವು ಶುಕ್ರವಾರ ಶಾಲೆಗೆ ರಜೆಯನ್ನೇಕೆ ಕೊಟ್ಟಿತು ಎಂಬುದು ಕಲ್ಕತ್ತಾದಲ್ಲಿ ಯಾರಿಗೂ ಅರ್ಥವಾಗಲಿಲ್ಲ. ಅನಿರೀಕ್ಷಿತವಾಗಿ ಶಾಲೆಗಳು ಮುಚ್ಚಿದ ಕಾರಣದಿಂದಾಗಿ ಅಲ್ಲಿಗೆ ಕೊಡಬೇಕಾಗಿದ್ದ ಎಲ್ಲ ಬ್ರೆಡ್ಡನ್ನು 'ಮಿಷನರೀಸ್ ಆಫ್ ಚಾರಿಟಿ'ಗೆ ಕೊಡಲಾಯಿತು. ಎರಡು ದಿನಗಳಿಗೆ ಸಾಕಾಗುವಷ್ಟು ಬ್ರೆಡ್ ದೇವರ ಕೃಪೆಯಿಂದಾಗಿ ಮದರ್ ಥೆರೆಸಾ ಅವರಿಗೆ ದೊರೆಯಿತು.

ಇನ್ನೊಂದು ಪ್ರಸಂಗ. ಒಮ್ಮೆ ರಸ್ತೆಯ ಬದಿಯಿಂದ ಎತ್ತಿಕೊಂಡು ಬಂದ ರೋಗಿಯೊಬ್ಬನಿಗೆ ಅಪರೂಪದ ಔಷಧವೊಂದು ಅಗತ್ಯವಾಗಿ ಬೇಕಾಗಿತ್ತು. ಅದಕ್ಕಾಗಿ ಕಲ್ಕತ್ತಾದಲ್ಲೆಲ್ಲಾ ಸಿಸ್ಟರ್‌ಗಳು ಹುಡುಕಿದರು, ಸಿಗಲಿಲ್ಲ. ಆ ಔಷಧ ಸಿಗದಿದ್ದಲ್ಲಿ ರೋಗಿ ಸಾಯುವುದು ಖಂಡಿತವಾಗಿತ್ತು. ಮದರ್ ಥೆರೆಸಾ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ದೇವರು ಅವರ ಪ್ರಾರ್ಥನೆಗೆ ಓಗೊಟ್ಟ. ಇದ್ದಕ್ಕಿದ್ದ ಹಾಗೆಯೇ ಓರ್ವ ಅಪರಿಚಿತ ಬಂದು ಔಷಧಗಳ ಸ್ಯಾಂಪಲ್‌ಗಳನ್ನು, ಮದರ್ ಥೆರೆಸಾ ಅವರ ಮುಂದಿಟ್ಟ ಅವುಗಳಲ್ಲಿ ಸಾಯುತ್ತಿದ್ದ ರೋಗಿಗೆ ಬೇಕಾದ ಔಷಧವೂ ಇದ್ದಿತು.

ಮತ್ತೊಂದು ಸಂದರ್ಭದಲ್ಲಿ

ಮಿತ್ರನೊಬ್ಬ ಕಾಯಿಲೆ ಮಲಗಿ ಮದರ್ ಥೆರೆಸಾಗೆ ತನ್ನ ಪರವಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸುವಂತೆ ಪತ್ರ ಬರೆದ. ಮದರ್ ಅವನಿಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಬರೆದರು: "ನಿನ್ನ ಹೆಸರನ್ನು ಗೋಡೆಯ ಮೇಲೆ ಬರೆಯಲಾಗಿದೆ. ಇಡೀ ಮನೆ, ನನ್ನನ್ನೂ ಸೇರಿದಂತೆ, ನಿನಗಾಗಿ ಪ್ರಾರ್ಥನೆ ಸಲ್ಲಿಸುತ್ತದೆ. ನಿನಗಾಗಿ ನಾವು ಮಾಡುವ ಪ್ರಾರ್ಥನೆಯನ್ನು ಸೈಂಟ್ ಪೀಟರ್ ಕೇಳಿ ಆಶ್ಚರ್ಯಗೊಳ್ಳುವನು; ನೀನು ಆದಷ್ಟು ಬೇಗ ಗುಣಮುಖ ನಾಗುವಂತೆ ಮಾಡುವನು. ನನಗಿದರಲ್ಲಿ ನಂಬಿಕೆಯಿದೆ. ಏನೇ ಆಗಲಿ, ನೀನು ದೇವರ ಬಳಿಗೆ ಹೋಗಲು ಸಿದ್ಧನಿದ್ದೀಯೆ. ಹಾಗಿದ್ದರೆ, ಅವನು ಸಂತೋಷಗೊಂಡು ನಿನಗಾಗಿ ಸ್ವರ್ಗದ ಬಾಗಿಲು ತೆರೆಯುವನು. ನನಗಿಂತ ಮೊದಲು ನೀನು ದೇವರ 'ಮನೆ'ಗೆ ಹೋದಲ್ಲಿ ಜೀಸಸ್ ಹಾಗೂ ಅವನ ತಾಯಿಗೆ ನನ್ನ ಪ್ರೀತಿಯನ್ನು ಮರೆಯದೆ ತಿಳಿಸು.''

ಮದರ್ ತೆರೆಸಾ ಅವರಲ್ಲಿ ಎದ್ದುಕಾಣುವ ಗುಣ ವಿನಯ ಹಾಗೂ ನಮ್ರತೆ. ಅವರಿಂದು ಪ್ರಪಂಚದಲ್ಲಿ ಪ್ರಸಿದ್ಧರಾಗಿರುವುದು ಈ ಗುಣದಿಂದಾಗಿಯೇ. ಅವರಲ್ಲಿ ಹಣವಿದೆ, ಜನ ಬೆಂಬಲವಿದೆ, ಪ್ರಸಿದ್ಧಿಯಿದೆ; ಅವರನ್ನು ದೇವರೆಂದು

ಆರಾಧಿಸುವವರು ಇದ್ದಾರೆ. ಆದರೂ ಅವರಿಗೆ ಸ್ವಲ್ಪವೂ ಅಹಂಕಾರವಿಲ್ಲ; 'ನಾನು' 'ನನ್ನಿಂದ' ಎನ್ನುವ ಮಮಕಾರವಿಲ್ಲ. ಅವರು ವಿನಯದಿಂದಾಗಿ ಬೆಳೆದಿದ್ದಾರೆ. ಬೆಳೆಸಿಕೊಳ್ಳುವ ವಿಧಾನವನ್ನು ಅವರೇ ಒಂದೆಡೆ ಹೇಳಿರುವರು:

- ಆದಷ್ಟು ಕಡಿಮೆ ಮಾತನಾಡು.
- ನಿನ್ನ ಕೆಲಸವೇನಿದೆಯೊ ಅಷ್ಟನ್ನು ಮಾಡು.
- ಬೇರೆಯದರಲ್ಲಿ ಆಸಕ್ತಿ ಅಥವಾ ಕುತೂಹಲವನ್ನು ತಾಳದಿರು.
- ಬೇರೆಯವರ ವ್ಯವಹಾರದಲ್ಲಿ ತಲೆಹಾಕದಿರು.
- ಭಿನ್ನಾಭಿಪ್ರಾಯಗಳಿಗೆ ಅವಕಾಶ ಮಾಡಿಕೊಡು. ತಪ್ಪುಗಳನ್ನು ತಿದ್ದಿಕೊ.
- ಬೇರೆಯವರ ತಪ್ಪುಗಳನ್ನು ತಳ್ಳಿಹಾಕು.
- ಅಪಾಯಕಾರಿಯಲ್ಲದ ನಿಂದೆಯನ್ನು ಒಪ್ಪಿಕೊ.
- ಬೇರೆಯವರ ಇಷ್ಟಕ್ಕೆ ತಲೆಬಾಗು.
- ನಿಂದೆ ಹಾಗೂ ಆಘಾತಗಳನ್ನು ಸ್ವೀಕರಿಸು.
- ತಾತ್ಸಾರವಾಗಿ ಕಂಡರೆ, ಮರೆತುಬಿಟ್ಟರೆ, ಇಷ್ಟಪಡದಿದ್ದರೆ ಅದನ್ನು ಒಪ್ಪಿಕೊ.
- ಕೆರಳಿಸಿದರೂ ಕರುಣೆಯಾಗಿರು, ಗಾಂಭೀರ್ಯದಿಂದಿರು.

★ ಹೆಚ್ಚಾಗಿ ಪ್ರೀತಿಸಬೇಕು, ಮೆಚ್ಚಬೇಕು ಎಂಬುದನ್ನು ಬಯಸದಿರು.

★ ಒಬ್ಬರ ಘನತೆಯ ಮೇಲೆ ನಿಲ್ಲದಿರು.

★ ಬೇರೊಂದು ಸರಿಯಿದ್ದರೂ ಚರ್ಚೆಯಲ್ಲಿ ತಲೆಬಾಗು.

★ ಕಷ್ಟವಾದುದನ್ನು ಯಾವಾಗಲೂ ಆಯ್ಕೆಮಾಡು.

ಮದರ್ ಥೆರೆಸಾ ಅವರು ಈ ಶತಮಾನದ ಶ್ರೇಷ್ಠ ಸಮಾಜ ಸೇವಕಿ. ತಾವು ಮಾಡುವ ಕೆಲಸದಲ್ಲಿ ದೇವರನ್ನು ಕಾಣುವ, ತಾವು ಲೋಕದ ಒಳಿತಿಗಾಗಿ ದೇವರ ಒಂದು ಸಾಧನವಾಗಿರುವುದಾಗಿ ನಂಬಿರುವ ಅಪೂರ್ವ ವ್ಯಕ್ತಿ. ಅವರದು ಸರಳ ಜೀವನ, ಸರಳವಾದ, ನಡೆ--ನುಡಿ. ಜಗತ್ತಿನ ಯಾವುದೇ ಮೂಲೆಯಿಂದ ಯಾರೇ ಪತ್ರಬರೆಯಲಿ ಅದಕ್ಕೆ ಅವರೇ ಉತ್ತರಿಸುವರು. ಹಾಗೆ ಉತ್ತರಿಸುವಾಗಲೂ ಕಡಿಮೆ ಬೆಲೆಯ ಕಾಗದ ಬಳಸುವರು. ಸಾಧ್ಯವಾದರೆ, ಅಂಚೆ ಕಾರ್ಡ್‌ನಲ್ಲಿಯೇ ಉತ್ತರಿಸುವರು. ದುಂದುವೆಚ್ಚ ಅವರಿಗೆ ಇಷ್ಟವಿಲ್ಲ.

ತಮ್ಮ ಕೆಲಸಗಳಿಗಾಗಿ ಅವರು ಯಾರನ್ನೂ ಹಣ ಕೊಡಿ ಎಂದು ಒತ್ತಾಯಿಸಿಲ್ಲ. ಆದರೂ ಹಣ ದೇಶ ವಿದೇಶಗಳಿಂದ ಬರುತ್ತಿದೆ, ಹಾಗೆಯೇ ಖರ್ಚಾಗುತ್ತದೆ. ಅವರ ಕಾರ್ಯಾಲಯದಲ್ಲಿ ವೈಭವವಿಲ್ಲ; ಕಂಪ್ಯೂಟರ್‌ಗಳ ಬಳಕೆಯಿಲ್ಲ. ಲೆಕ್ಕಪತ್ರಗಳನ್ನಿಡುವ ವ್ಯವಸ್ಥೆಯಿಲ್ಲ. ಸರಕಾರದ ಸಹಾಯ ಬೇಡುವ ಆಲೋಚನೆಯೇ ಇಲ್ಲ. ಕಾರ್ಯಕರ್ತರಿಗೆ ಹಣ ಸಂಗ್ರಹಿಸಲು ಸಮಯವೇ ಇಲ್ಲ. ಏಕೆಂದರೆ, ಅವರಿಗೆ ರೋಗಿಗಳನ್ನು ಆರೈಕೆಮಾಡುವ, ಒಂಟಿತನದಿಂದ ನರಳುವವರನ್ನು ಸಮಾಧಾನಿಸುವ, ಹಸಿದವರಿಗೆ ಆಹಾರ ನೀಡುವ ಹೆಚ್ಚಿನ ಜವಾಬ್ದಾರಿಯಿದೆ.

"ಪ್ರಚಾರ ನನಗೆ ಬೇಕಿಲ್ಲ. ಬೇಡ, ಬೇಡ, ನನಗದು ಬೇಕಿಲ್ಲ"



ಬದುಕಿನಲ್ಲಿ ನನಗಿನ್ನೇನೂ ಬೇಕಿಲ್ಲ

ಎಂದು ಮದರ್ ಥೆರೆಸಾ ಹೇಳಿದರೂ, ಪ್ರಚಾರ ಅವರನ್ನು ಹಿಂಬಾಲಿಸಿದೆ. ನೋಬೆಲ್ ಬಹುಮಾನ ಬಂದ ಮೇಲೆ, ಇನ್ನಷ್ಟು ಪ್ರಚಾರವಾಯಿತು. ಪ್ರಚಾರ ಅಡ್ಡಿಯಾಗಿದೆ ಬಡವರ ಸೇವಾಕಾರ್ಯಗಳಿಗೆ. ತಾನಿನ್ನು ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲವೆಂದು ಅವರು ಪತ್ರಿಕೆಯೊಂದಕ್ಕೆ ಬಹಿರಂಗವಾಗಿ ತಿಳಿಸಿದರು. ಆದರೂ, ಪತ್ರಿಕಾಕರ್ತರು, ಟಿ.ವಿ.ಯವರು ಅವರ ಪರವಾಗಿ ನಿರಂತರವಾಗಿ ಪ್ರಚಾರಕಾರ್ಯ ಮಾಡುತ್ತಿರುವರು.

ಪ್ರಶಸ್ತಿ–ಪುರಸ್ಕಾರಗಳು

ಅಂತರರಾಷ್ಟ್ರೀಯ ಶಾಂತಿಗಾಗಿ ಬಹುಮಾನ, ಕೆನಡಿ ಇಂಟರ್‌ನ್ಯಾಷನಲ್ ಅವಾರ್ಡ್, ಭಾರತ ಸರಕಾರದಿಂದ ಪಂಡಿತ ನೆಹರೂ ಅಂತರರಾಷ್ಟ್ರೀಯ ತಿಳುವಳಿಕೆಗಾಗಿ ಬಹುಮಾನ, ಪ್ರಿನ್ಸ್ ಆಫ್ ಎಡಿನ್ ಬರೋರವರಿಂದ ಟೆಂಪಲ್‌ಟನ್ ಬಹುಮಾನ, ಆಲ್ಬರ್ಟ್ ಶೆಯಿಟ್ಸರ್ ಬಹುಮಾನ, ಕೇಂಬ್ರಿಡ್ಜ್

ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ಶಾಂತಿಗಾಗಿ ನೋಬೆಲ್ ಬಹುಮಾನ, ಭಾರತ ಸರಕಾರದಿಂದ 'ಭಾರತರತ್ನ' ಪ್ರಶಸ್ತಿ ಹೀಗೆ ಪ್ರತಿಷ್ಠಿತ ಪುರಸ್ಕಾರಗಳು ಅವರ ಸೇವಾಕಾರ್ಯಗಳಿಗಾಗಿ ದೊರೆತಿವೆ. ಇವುಗಳಲ್ಲಿ ಒಂದೊಂದೂ ಅತ್ಯಂತ ಮಹತ್ವದ ಗೌರವಗಳು. ಒಬ್ಬ ವ್ಯಕ್ತಿ ತನ್ನ ಜೀವಮಾನದಲ್ಲಿ ತನ್ನ ಸಾಧನೆಗಾಗಿ ಈ ಪ್ರಶಸ್ತಿಗಳಲ್ಲಿ ಒಂದನ್ನು ಪಡೆಯಬಹುದು. ಆದರೆ ಮದರ್ ಥೆರೆಸಾ ಒಬ್ಬರೇ ಈ ಎಲ್ಲ ಪ್ರಶಸ್ತಿಗಳನ್ನು ಪಡೆದಿರುವುದು ಆಶ್ಚರ್ಯ, ಅಪರೂಪ. ಈ ಪುರಸ್ಕಾರಗಳನ್ನು ಅವರು ಬಯಸಿದವರಲ್ಲ. ಅವು ಇವರನ್ನು ಹುಡುಕಿಕೊಂಡು ಬಂದಿವೆ. ಈ ಪ್ರಶಸ್ತಿಗಳಿಂದ ಮದರ್ ಥೆರೆಸಾ ಅವರಿಗೆ ಗೌರವ ಬಂದಿಲ್ಲ, ಮದರ್ ಥೆರೆಸಾ ಅವರಿಂದಾಗಿ ಈ ಪ್ರಶಸ್ತಿಗಳಿಗೆ ಗೌರವ ಬಂದಿದೆ. ವ್ಯಕ್ತಿಗೆ ಬದುಕಿನಲ್ಲಿ ಇದಕ್ಕಿಂತ ದೊಡ್ಡದು ಯಾವುದಿದೆ. ಮದರ್ ತೆರೆಸಾ ಒಬ್ಬ ವ್ಯಕ್ತಿಯಲ್ಲ, ಶಕ್ತಿ, ಸಂಸ್ಥೆ; ಆದರ್ಶವೊಂದರ ಸಂಕೇತ.

☆ ☆ ☆

ಕನ್ನಡ ವಿಶ್ವವಿದ್ಯಾಲಯ ದವರೆಗೆ ಉತ್ತಮ
ಹಾಗೂ ಉಪಯುಕ್ತ ್ಯಪುಸ್ತಕ ರಚನಾ
ವಿಭಾಗ'ವನ್ನು ತೆರೆದ ುಪುಸ್ತಕ ರಚನೆ
ಮಾಡಬೇಕೆಂದು ಚಿಂ ವಸಾಕ್ಷರರಿಗಾಗಿ
ಪುಸ್ತಕ ಬರೆಸುವ ತ ವಹಿಸಿಕೊಟ್ಟರು.
ವಿಶ್ವವಿದ್ಯಾಲಯವು ತ ಲೇಖಕರನ್ನು,
ಭಾಷಾತಜ್ಞರನ್ನು, ಶಿಕ್ಷ ರ ಅಭಿಪ್ರಾಯ,
ಸಲಹೆ, ಸಹಕಾರಗಳ ುದ್ರಣ ವಿನ್ಯಾಸ,
ಚಿತ್ರಗಳ ಮಹತ್ವ, ಕ ಸಲ ಚರ್ಚಿಸಿ
ಯೋಜನೆಯನ್ನು ಅ

ನವಸಾಕ್ಷರರಿಗಾಗಿ ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ ಭಾಷಾತಜ್ಞರಿಂದ
ಪರಿಶೀಲಿಸಲಾಯಿತು ಕೊಂಡು ಅವರಿಗೆ
ಕಮ್ಮಟಗಳನ್ನು ನ ಆಯ್ದ ಜಿಲ್ಲೆ,
ತಾಲೂಕುಗಳಿಗೆ ಕಳ ವವರಿಂದ ಅದರ
ಗುಣದೋಷಗಳ ಬ ಶ್ವವಿದ್ಯಾಲಯದ
ಗಣಕಯಂತ್ರದಲ್ಲಿ ಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ ವಾಗಿ ವಿಷಯದ
ಆದ್ಯತೆಗಳನ್ನು ನಿಧ ೀಖಕರು ನಮ್ಮ
ವಿಶ್ವವಿದ್ಯಾಲಯದ ರೂಪ ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು